ಸಂಪುಟ : 10 ಸಂಚಿಕೆ 4 ಪುಟ : 4+2 ಬೆಲೆ: 3.00 ಬುಧವಾರ ಜನವರಿ 29 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 4 Pages : 4+2 Price : 3.00 Wednesday January 29 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಸೂಡಿಯ ನಾಗಕುಂಡ ಮೆಟ್ಟಿಲು ಬಾವಿಯ ದತ್ತು ಸ್ವೀಕಾರದ ಒಡಂಬಡಿಕೆ ಕಾರ್ಯಕ್ರಮದಲ್ಲಿ ಸಚಿವ ಡಾ. ಎಚ್.ಕೆ. ಪಾಟೀಲ

# ಸ್ಮಾರಕಗಳನ್ನು ಉಳಿಸಲು ಎಲ್ಲರ ಸಹಕಾರ ಅತ್ಯವಶಕ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕದಲ್ಲಿ ಅಂದಾಜು 25000 ಸ್ಮಾರಕಗಳಿದ್ದು, ಅದರಲ್ಲಿ ಈ ವರ್ಷ ಕನಿಷ್ಠ 3 ಸಾವಿರ ಸ್ಮಾರಕಗಳನ್ನು ಸಂರಕ್ಷಿಸಿ ಅದರ ಇತಿಹಾಸವನ್ನು ಮುಂದಿನ ಪೀಳಿಗೆಗೆ ನೀಡುವ ಉದ್ದೇಶವನ್ನು ಹೊಂದಿದ್ದೇವೆ. ಸ್ಮಾರಕಗಳ ನಿರ್ವಹಣೆಯಲ್ಲಿ ಈಗಾಗಲೇ ಸರ್ಕಾರ ಕಾರ್ಯ ನಿರ್ವಹಿಸುತ್ತಿದ್ದು, ಅದರ ಜೊತೆಗೆ ಡೆಕ್ಕನ್ ಹೆರಾಲ್ಡ್ ಫೌಂಡೇಶನ್ ಕೈಜೋಡಿಸಿ ಸೂಡಿಯ ನಾಗಕುಂಡ ಮೆಟ್ಟಿಲು ಬಾವಿಯ ದತ್ತು ಸ್ವೀಕಾರ ಮಾಡಿದ್ದಕ್ಕೆ ರಾಜಶ್ರೀ ಪಿನ್ನಮನೇನಿ ಅವರಿಗೆ ಅಭಿನಂದನೆಗಳು ಎಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್. ಕೆ. ಪಾಟೀಲ ನುಡಿದರು.

ನಗರದ ಜಿಲ್ಲಾಡಳಿತ ಭವನದ ಕೋರ್ಟ್ ಹಾಲ್‌ನಲ್ಲಿ ಮಂಗಳವಾರ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸ್ಮಾರಕ ದತ್ತು ಯೋಜನೆಯಡಿ ಸ್ಮಾರಕ ಮಿತ್ರ ಡೆಕ್ಕನ್ ಹೆರಿಟೇಜ್ ಫೌಂಡೇಷನ್‌ನೊಂದಿಗೆ ಗದಗ ಜಿಲ್ಲೆ ಸೂಡಿಯ ನಾಗಕುಂಡ ಮೆಟ್ಟಿಲು ಬಾವಿಯ ದತ್ತು ಸ್ವೀಕಾರದ ಒಡಂಬಡಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಸೂಡಿಯ ನಾಗಕುಂಡ ಮೆಟ್ಟಿಲು ಬಾವಿಯ ದತ್ತು ಸ್ವೀಕರಿಸಿದಕ್ಕೆ ರಾಜಶ್ರೀ ಪಿನ್ನಮನೇನಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.




ರೋಣ ಮತಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ ಮಾತನಾಡಿ, ರಾಜ್ಯದಲ್ಲಿ ಐತಿಹಾಸಿಕ ಸ್ಥಳಗಳನ್ನು ಹಿಂದಿನಿಂದಲೂ ಸರ್ಕಾರ ಸಂರಕ್ಷಣೆ ಮಾಡಿಕೊಂಡು ಬಂದಿದೆ. ಸಚಿವ ಎಚ್.ಕೆ. ಪಾಟೀಲರು ವಿಶೇಷ ಆಸಕ್ತಿ ವಹಿಸಿ ಹೊಸ ಆಲೋಚನೆಗಳೊದಿಂಗೆ ಸ್ಮಾರಕ ದತ್ತು ಸ್ವೀಕಾರ ಯೋಜನೆ ಪ್ರಾರಂಭಿಸಿದಕ್ಕೆ ಅಭಿನಂದನೆ ಸಲ್ಲಿಸಿದರು. ರಾಜಶ್ರೀ ಪಿನ್ನಮನೇನಿ ಅವರು ಹೈದರಾಬಾದ್‌ನಿಂದ ಗದಗ ಜಿಲ್ಲೆಯ ಸೂಡಿ ನಾಗಕುಂಡ ಮೆಟ್ಟಿಲು ಬಾವಿಯ ದತ್ತು ಸ್ವೀಕರಿಸಿದಕ್ಕೆ ವಿಶೇಷ ಅಭಿನಂದನೆಗಳನ್ನು ಸಲ್ಲಿಸಿದರು.

ಗದಗ ಜಿಲ್ಲೆ ಸೂಡಿಯು ರೋಣ ಮತಕ್ಷೇತ್ರಕ್ಕೆ ಸೇರಿದ್ದು, ಭಾರತರತ್ನ ಭೀಮಸೇನ ಜೋಶಿ, ದುರ್ಗಸಿಂಹರಂತಹ ಮಹಾನ್ ವ್ಯಕ್ತಿಗಳ ಬೀಡಾಗಿದೆ. ಗದಗ ಜಿಲ್ಲೆ ಸಂಗೀತ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಪರಿಮಿತ ಇತಿಹಾಸವನ್ನು ಹೊಂದಿದೆ ಎಂದು ನುಡಿದರು.

ಇತ್ತೀಚೆಗೆ ಪಾರಂಪರಿಕ ಪ್ರದೇಶವಾದ ಲಕ್ಕುಂಡಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಆದಿಯಾಗಿ ಜಿಲ್ಲಾಧಿಕಾರಿ, ಜಿ.ಪಂ ಸಿಇಒ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಲಕ್ಕುಂಡಿಯಲ್ಲಿ ಉತ್ಖನನ ಕಾರ್ಯ ಕೈಗೊಂಡು ಒಂದೇ ದಿನದಲ್ಲಿ 1 ಸಾವಿರಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಗಿದೆ. ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಕರ್ನಾಟಕದಿಂದ ಲಕ್ಕುಂಡಿ ಇತಿಹಾಸ ಬಿಂಬಿಸುವ ಸ್ತಬ್ಧಚಿತ್ರ ಪ್ರದರ್ಶನಗೊಂಡಿದೆ, ಲಕ್ಕುಂಡಿಯ ಸಂಪೂರ್ಣ ಇತಿಹಾಸ ತಿಳಿಯಲು ಮತ್ತು ಅದರ ಅಭಿವೃದ್ಧಿಗೆ ಲಕ್ಕುಂಡಿ ಪಾರಂಪರಿಕ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ. ಸ್ಮಾರಕಗಳನ್ನು ಉಳಿಸಲು ಎಲ್ಲರ ಸಹಕಾರ ಅತ್ಯವಶಕ ಎಂದು ಸಚಿವರು ಹೇಳಿದರು.

ಡೆಕ್ಕನ್ ಹೆರಿಟೇಜ್ ಫೌಂಡೇಷನ್ ಸ್ಥಾಪಕರು ಮತ್ತು ಸಹ ಸ್ಥಾಪಕರಾದ ಡಾ. ಹೆಲೆನ್ ಫಿಲಾನ್ ಮತ್ತು ಸ್ಟೀಫನ್ ಬ್ಲೋಚ್ ಸಲೋಜ್ ಮಾತನಾಡಿ, ಭಾರತವು ತನ್ನದೇ ಆದ ಶ್ರೀಮಂತ ಇತಿಹಾಸವನ್ನು ಹೊಂದಿದೆ. ಅದರಲ್ಲಿ ಗದಗಿನ ವಾಸ್ತುಶಿಲ್ಪ ಸಂಸ್ಕೃತಿ ವಿಶೇಷತೆಯಿಂದ ಕೂಡಿದೆ. ಸ್ಮಾರಕದ ಹತ್ತಿರ ಹೋಗುತ್ತಿದ್ದಂತೆ ಇಲ್ಲಿ ಜನರು ಅತ್ಯಂತ ಪ್ರೀತಿ-ವಿಶ್ವಾಸದಿಂದ ಕಾಣುತ್ತಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜಶ್ರೀ ಪಿನ್ನಮನೇನಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ವಾಸಣ್ಣ ಕುರಡಗಿ, ಸಿದ್ದು ಪಾಟೀಲ, ಅಶೋಕ ಮಂದಾಲಿ, ವಿ.ಬಿ. ಸೋಮನಕಟ್ಟಿಮಠ, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತ ದೇವರಾಜ ಎ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ, ಜಿ.ಪಂ ಸಿಇಒ ಭರತ್ ಎಸ್, ಡಿಸಿಎಫ್ ಸಂತೋಷಕುಮಾರ, ಡೆಕ್ಕನ್ ಹೆರಿಟೇಜ್ ಫೌಂಡೇಶನ್ ಆಫ್ ಇಂಡಿಯಾದ ಪ್ರತಿಮಾ ರಾವ್, ರಂಗ, ಸುಜಾತ, ಶೀತಲ್, ಜಿಲ್ಲಾ ಮಟ್ಟದ ಅಧಿಕಾರಿಗಳು ಗಣ್ಯರು ಉಪಸ್ಥಿತರಿದ್ದರು.




## ಇಂದಿನ ನೀರು ಪೂರೈಕೆ ವಿವರ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ಜನವರಿ- 29 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

**ಸ್ಥಳಗಳ ವಿವರ:** ವಾರ್ಡ್ ನಂ. 19, 24, 25 - ಬಾವಿ ಮೆಂಬರ ಲೈನ್, ಹಾವನೂರ ಲೈನ್, ದುರ್ಗಮ್ಮನ ಗುಡಿ 2 ಭಾಗಗಳು, ಕಾಗದಗೇರಿ 2 ಭಾಗಗಳು, ಗುಂಜಿನರವರ ಲೈನ್, ಭಟ್ಟರ ಲೈನ್, ವಿ ಎನ್ ಟಿ ರಸ್ತೆ, ಕೂನೇರಿ ಹೊಂಡ ಹೊಸ ಲೈನ್, ಮದ್ಲಿ ಓಣಿ, ಬಳೆಗಾರ ಲೈನ್, ಮೀನಿನ ಮಾರ್ಕೆಟ್, ನಮಾಜಿಯವರ ಲೈನ್. ವಾರ್ಡ್ ನಂ. 1 - ಎಸ್ ಎಂ ಕೃಷ್ಣ ನಗರ ಪೂರ್ತಿ ಭಾಗಗಳು.

ವಾರ್ಡ್ ನಂ. 10, 6 - ಸಿಹಿ ನೀರಿನ ಬಾವಿ ಸೆಟ್, ಮಾನೇದವರ ಲೈನ್, ಮುಳಗುಂದರವರ ಲೈನ್, ಗಣಾಚಾರ್ಯ ಲೇಔಟ್, ಮಸೂತಿ ಲೈನ್ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 35 - ಬಾಲಾಜಿ ನಗರ, 9 ನಂ. ಶಾಲೆ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 28 - ಪಂಚಾಕ್ಷರಿ ನಗರ 5ನೇ ಕ್ರಾಸ್ ಉಳಿದ ಕೆಲವು ಭಾಗಗಳು.

**ಪ್ರಕಟಣೆ:** ಗದಗ-ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ತುಂಗಭದ್ರಾ ನದಿಯಿಂದ ಸರಬರಾಜು ಆಗುತ್ತಿರುವ ನೀರನ್ನು ಕಾಯಿಸಿ ಆರಿಸಿ ಕುಡಿಯಲು ನಿರ್ದೇಶನ ನೀಡಲಾಗಿದೆ ಹಾಗೂ ತಮಗೆ ನೀರು ಸಾಕಾದಾಗ ತಮ್ಮ ತಮ್ಮ ನೀರಿನ ನಳಗಳನ್ನು ಬಂದ ಮಾಡುವ ಮೂಲಕ ನೀರು ಪೋಲಾಗದಂತೆ ತಡೆಯುವಲ್ಲಿ ಮುತುವರ್ಜಿ ವಹಿಸಬೇಕೆಂದು ಹಾಗೂ ತಮ್ಮ ನೀರಿನ ಕರ ಪಾವತಿಸುವಲ್ಲಿ ತಾವು ವಿಳಂಬ ಮಾಡದೇ ತಮ್ಮ ಬಾಕಿ ಇರುವ ನೀರಿನ ಕರವನ್ನು ನಗರಸಭೆಗೆ ಪಾವತಿಸಬೇಕೆಂದು ತಿಳಿಸಿದೆ. ಒಂದು ವೇಳೆ ಈ ರೀತಿ ಮಾಡದೇ ಹೋದ ಸಂದರ್ಭದಲ್ಲಿ ತಮಗೆ ದಂಡ ವಿಧಿಸಿ ತಮ್ಮ ನೀರಿನ ನಳವನ್ನು ಬಂದ ಮಾಡಲಾಗುವುದು ಎಂದು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಕಸ್ಮಿಕ ಬೆಂಕಿ ಅವಘಡ: ಮನೆ ಭಸ್ಮ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸಮೀಪದ ಬಟ್ಟೂರು ಗ್ರಾಮದಲ್ಲಿ ಆಕಸ್ಮಿಕ ಬೆಂಕಿ ಅವಘಡದಿಂದ ಚನಬಸವ್ವ ಫಕ್ಕೀರಪ್ಪ ಬಾರ್ಕಿ ಎಂಬುವವರ ಮನೆ ಸಂಪೂರ್ಣವಾಗಿ ಸುಟ್ಟು ಕರಕಲಾಗಿರುವ ಘಟನೆ ಮಂಗಳವಾರ ಬೆಳಿಗ್ಗೆ ನಡೆದಿದೆ.

ಬೆಂಕಿಯ ಆರ್ಭಟಕ್ಕೆ ಮನೆಯಲ್ಲಿನ ಚಿನ್ನ, ಬೆಳ್ಳಿಯ ಆಭರಣಗಳು, ಎರಡು-ಮೂರು ದಿನಗಳ ಹಿಂದೆ ಸಾಲ ಮಾಡಿ ತಂದು ಇಟ್ಟಿದ್ದ ಹಣ ಸೇರಿದಂತೆ ಮನೆಯಲ್ಲಿನ ಪೀಠೋಪಕರಣಗಳು, ಕಪಾಟುಗಳು, ದವಸ-ಧಾನ್ಯಗಳು, ಪಾತ್ರೆಗಳು, ಕೃಷಿ ಸಲಕರಣೆಗಳು ಸುಟ್ಟು ಕರಕಲಾಗಿವೆ. ಅವಘಡದಲ್ಲಿ ಲಕ್ಷಾಂತರ ಮೌಲ್ಯದ ವಸ್ತುಗಳು ಭಸ್ಮವಾಗಿವೆ. ಅಗ್ನಿ ಶಾಮಕ ಠಾಣೆಗೆ ಕರೆ ಮಾಡಿದಾಗ, ಅಗ್ನಿಶಾಮಕ ವಾಹನ ಬರಲು ತಡವಾಗಿದ್ದರಿಂದ ಗ್ರಾಮಸ್ಥರೇ ಬೆಂಕಿ ನಂದಿಸಲು ಮುಂದಾಗಿದ್ದಾರೆ.

ನಾವು ಕೂಲಿ ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಘಟನೆ ನಡೆದಿದ್ದು, ಬೆಂಕಿ ಹೇಗೆ ಹೊತ್ತಿಕೊಂಡಿತೋ ಗೊತ್ತಿಲ್ಲ. 15 ವರ್ಷಗಳಿಂದ ಇದೇ ಗುಡಿಸಲಲ್ಲಿ ವಾಸ ಮಾಡುತ್ತಿದ್ದೇವೆ. ಗ್ರಾ.ಪಂ ಆಡಳಿತ ಮಂಡಳಿ ನಮಗೆ ಆಶ್ರಯ ಮನೆ ನೀಡಿಲ್ಲ ಎಂದು ಮನೆ ಮಾಲಿಕ ಫಕ್ಕಿರಪ್ಪ ಕಣ್ಣೀರು ಹಾಕಿದರು.

ಸರ್ಕಾರ ಬಡವರಿಗಾಗಿ ಆಶ್ರಯ ಮನೆ ನೀಡುತ್ತಿದ್ದರೂ, ಗ್ರಾಮ ಪಂಚಾಯಿತಿ ಅಧಿಕಾರಿಗಳು, ಜನಪ್ರತಿನಿಧಿಗಳು ಇಂತವರಿಗೆ ಮನೆಗಳನ್ನೇಕೆ ಕೊಡುವದಿಲ್ಲ ಎನ್ನುವ ಪ್ರಶ್ನೆ ಮೂಡುವಂತಾಗಿದೆ. ಈಗಲಾದರೂ ಇಂತಹ ಬಡವರನ್ನು ಗುರುತಿಸಿ ಆಶ್ರಯ ಮನೆಗಳನ್ನು ಕೊಡುವ ಕಾರ್ಯವನ್ನು ಗ್ರಾ.ಪಂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಮಾಡಬೇಕಾಗಿದೆ ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

### ತಿರುಚ್ಚಿ ಮಹಾಸ್ವಾಮಿಗಳ 33ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ. ಪಾಟೀಲ

# ಕೈಲಾಸ ಆಶ್ರಮದಿಂದ ಭಕ್ತರ ಬದುಕಿನಲ್ಲಿ ಬದಲಾವಣೆ

**■ವಿಜಯಸಾಕ್ಷಿ ಸುದ್ದಿ, ಗದಗ**

ನಾವಿಂದು ಹಲಕೋಟಿಯ ಪುಣ್ಯಭೂಮಿಯಲ್ಲಿ ಸೇರಿದ್ದೇವೆ. ಶ್ರೀ ತಿರುಚ್ಚಿ ಮಹಾಸ್ವಾಮಿಜಿಗಳಿಂದ ಸ್ಥಾಪನೆಯಾದ ಕೈಲಾಸ ಆಶ್ರಮದಿಂದ ಭಕ್ತರ ಬದುಕಿನಲ್ಲಿ ಬದಲಾವಣೆ ಆಗಿದೆ. ಪೂಜ್ಯರು ಹಾಕಿಕೊಟ್ಟ ಪರಂಪರೆ, ಆಚರಣೆಗಳನ್ನು ನಾವು ಪಾಲಿಸಿಕೊಂಡು ಹೋಗುತ್ತಿದ್ದು, ಪ್ರಸಕ್ತ ಕೈಲಾಸ ಆಶ್ರಮದ ಆಚಾರ್ಯ ಜಗದ್ಗುರು ಜಯೇಂದ್ರಪುರಿ ಸ್ವಾಮಿಗಳು ಪ್ರತಿ ವರ್ಷದ ವಾರ್ಷಿಕೋತ್ಸವದ ಸಂದರ್ಭದಲ್ಲಿ ಭಕ್ತರಿಗೆ ತಿರುಚ್ಚಿ ಶ್ರೀಗಳ ದರ್ಶನ ಹಾಗೂ ಆಶೀರ್ವಾದ ಮಾಡುತ್ತಾ ಬಂದಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್. ಕೆ. ಪಾಟೀಲ ಹೇಳಿದರು.

ತಾಲೂಕಿನ ಹಲಕೋಟಿ ಗ್ರಾಮದ ಹೊರ ವಲಯದಲ್ಲಿರುವ ಶ್ರೀ ರಾಜರಾಜೇಶ್ವರಿ ದೇವಸ್ಥಾನದಲ್ಲಿ ನಡೆದ ತಿರುಚ್ಚಿ ಮಹಾಸ್ವಾಮಿಗಳ 33ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಜನರ ಆರ್ಥಿಕ ಬದುಕು ಇಂದು ಸುಧಾರಣೆ ಆಗುತ್ತಿದೆ. ಆದರೆ, ಪ್ರೀತಿ, ಅನುರಾಗ, ಅನುಕಂಪಗಳು ಕುಸಿಯುತ್ತಿದ್ದು, ಭಕ್ತರು ಮಾನವಿಯತೆ ಬದುಕಿಗೆ ಒತ್ತು ಕೊಡುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು.

ಈಶ್ವರಿ ವಿಶ್ವವಿದ್ಯಾಲಯದ ಬ್ರಹ್ಮಕುಮಾರಿ ಜಯಂತಿ ಅಕ್ಕನವರು ಮಾತನಾಡಿ, ಸಾಧು-ಸನ್ಯಾಸಿಗಳು, ಬ್ರಹ್ಮಚಾರಿಗಳಿಂದ ನಮ್ಮ ದೇಶದಲ್ಲಿ ಇನ್ನೂ ಆಧ್ಯಾತ್ಮಿಕತೆ ಉಳಿದಿದೆ. ಜೀವನದಲ್ಲಿ ಸಾಧನೆ ಅಗತ್ಯವಿದ್ದು, ಅನುಭಾವದಲ್ಲಿ ಕೊರತೆ ಎದ್ದು ಕಾಣುತ್ತಿದೆ. ನುಡಿಗಳು ಇವೆ.



23 ವರ್ಷಗಳ ಕಾಲ ಕಾರ್ಯಾಂಗದ ಭಾಗವಾಗಿ ಕೆಲಸ ಮಾಡಿದ್ದೇನೆ. ಕೆಲವು ರಾಜಕಾರಣಿಗಳ ಜೊತೆ ಸಂಘರ್ಷಕ್ಕೂ ಇಳಿದಿದ್ದೇನೆ. ಆದರೆ, ಎಲ್ಲವೂ ನಶ್ವರ ಎಂದರಿತು ಜಂಜಾಟದಿಂದ ದೂರ ಉಳಿದು ಸನ್ಯಾಸತ್ವ ಸ್ವೀಕರಿಸಿ, ಸಮಾಜ ಸುಧಾರಣೆಯಲ್ಲಿ ಚಿಕ್ಕ ಸೇವೆ ಸಲ್ಲಿಸುತ್ತಿದ್ದೇನೆ. ಸಮಾಜವನ್ನು ಸರಿ ದಾರಿಗೆ ತರಲು, ಸನಾತನ ಸಂಸ್ಕೃತಿ ಉಳಿಯಲು 33 ವರ್ಷಗಳ ಹಿಂದೆ ತಿರುಚ್ಚಿ ಸ್ವಾಮೀಜಿಗಳು ಶ್ರಮಿಸಿದ್ದರು ಎನ್ನುವುದು ಹೆಮ್ಮೆಯ ವಿಷಯವಾಗಿದೆ.

**- ಶ್ರೀ ನಿಶ್ಚಿದಾನಂದ ಸ್ವಾಮೀಜಿ.**
**ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ.**

▸▸3ನೇ ಪುಟಕ್ಕೆ

### ಉಪನ್ಯಾಸಕರ ಪುನಶ್ಚೇತ ತರಬೇತಿ ಶಿಬಿರ ಉದ್ಘಾಟಿಸಿದ ವಿ.ಪ ಸದಸ್ಯ ಎಸ್.ವಿ. ಸಂಕನೂರ

# ಅಧ್ಯಾಪಕರು ವೃತ್ತಿ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಮೇಣದ ಬತ್ತಿ ತಾನು ಹೊತ್ತಿ ಉರಿದಾಗಲೇ ಇನ್ನೊಂದು ದೀಪವನ್ನು ಬೆಳಗಿಸಲು ಸಾಧ್ಯ. ದೀಪದಿಂದ ದೀಪವನ್ನು ಬೆಳಗಿಸಿ ಬೆಳಕನ್ನು ನೀಡುವಂತೆ ಅಧ್ಯಾಪಕರಾದವರು ತಮ್ಮ ಜ್ಞಾನವನ್ನು ವಿಸ್ತರಿಸಿಕೊಂಡು ಮಕ್ಕಳಿಗೆ ಹಂಚಿದಾಗ ಅವರ ಜ್ಞಾನದ ಬೆಳಕು ವಿಸ್ತರಿಸುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವ್ಹಿ. ಸಂಕನೂರ ಹೇಳಿದರು.

ಅವರು ಜ. 28 ಮತ್ತು 29ರಂದು ನಡೆಯುವ ಬೆಳಗಾವಿ, ಚಿಕ್ಕೋಡಿ, ಹಾವೇರಿ, ಧಾರವಾಡ, ಗದಗ ಜಿಲ್ಲೆಗಳ ಸರಕಾರಿ ಪದವಿಪೂರ್ವ ಕಾಲೇಜುಗಳ ಕನ್ನಡ ಮತ್ತು ಸಮಾಜಶಾಸ್ತ್ರ ವಿಷಯದ ಉಪನ್ಯಾಸಕರ ಪುನಶ್ಚೇತ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕರ್ನಾಟಕ ಶಾಲಾ ಶಿಕ್ಷಣ ಇಲಾಖೆಯು (ಪದವಿಪೂರ್ವ) ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಸುಧಾರಣೆಗಾಗಿ ಹೊಸ ಮಾದರಿಯ ಪ್ರಶ್ನೆ ಪತ್ರಿಕೆಯ ಸ್ವರೂಪ, ನೀಲನಕ್ಷೆ ಮತ್ತು ವಿಷಯಾಧಾರಿತ ತರಬೇತಿಯನ್ನು ಹಮ್ಮಿಕೊಂಡಿದ್ದು, ಎರಡೂ ವಿಷಯಗಳ ಉಪನ್ಯಾಸಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಇಲಾಖೆಯ ಗದಗ ಜಿಲ್ಲಾ ಉಪನಿರ್ದೇಶಕ ಸಿದ್ದಲಿಂಗ ಬಂಡು, ಮಸನಾಯಕ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿ, ಎರಡು ದಿನಗಳ ಈ ಶಿಬಿರದ ಲಾಭವನ್ನು ಪಡೆದುಕೊಂಡು ಇಲಾಖೆಯ ಉದ್ದೇಶವನ್ನು ಸಾರ್ಥಕಗೊಳಿಸಬೇಕೆಂದು ಹೇಳಿದರು.

ಶಿಬಿರದ ಕುರಿತು ಜಿಲ್ಲಾ ಸಂಚಾಲಕ ಪ್ರಾ. ಎಂ.ಸಿ. ಕಟ್ಟಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯ ಮೇಲೆ ಪ್ರೊ. ಜಿ.ಎನ್. ಕುರ್ತಕೋಟಿ, ಪ್ರಾ. ಅಶೋಕ ಅಂಗಡಿ, ಪ್ರಾ. ಬಿ.ಜಿ. ಗಿರಿತಿಮ್ಮಣ್ಣವರ ಡಾ. ಅರ್ಜುನ ಗೊಳಸಂಗಿ, ಪ್ರಾ. ಆಯ್.ಸಿ. ಹಾದಿಮನಿ ಉಪಸ್ಥಿತರಿದ್ದರು. ಶಿಬಿರದಲ್ಲಿ ಕನ್ನಡ ಮತ್ತು ಸಮಾಜಶಾಸ್ತ್ರ ವಿಷಯಗಳ 120 ಉಪನ್ಯಾಸಕರು ಭಾಗವಹಿಸಿದ್ದರು.

ಎಚ್.ಎಂ. ದೊಡ್ಡಮನಿ ಪ್ರಾರ್ಥಿಸಿದರು. ಎಸ್.ಪಿ. ಗುಳಗಣ್ಣವರ ಸ್ವಾಗತಿಸಿದರು. ಪ್ರಾ. ಬಿ.ಬಿ. ಪಾಟೀಲ ವಂದಿಸಿದರು.




ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗದುಗಿನ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರವಿ ಮೂಲಿಮನಿ ಮಾತನಾಡುತ್ತ, ಎಲ್ಲ ವೃತ್ತಿಗಳಲ್ಲಿ ಶಿಕ್ಷಕ ವೃತ್ತಿ ಶ್ರೇಷ್ಠವಾಗಿದೆ. ಇಂತಹ ಪುನಶ್ಚೇತನ ಶಿಬಿರದ ಮೂಲಕ ಹೊಸ ಆಲೋಚನೆ, ಹೊಸ ದೃಷ್ಟಿಕೋನದಿಂದ ಮಕ್ಕಳಿಗೆ ಪಾಠ ಮಾಡಿ ಸುಭದ್ರ ಸಮಾಜವನ್ನು ನಿರ್ಮಿಸಬೇಕೆಂದು ಕರೆ ನೀಡಿದರು.

### ಎರಡು ಪ್ರತ್ಯೇಕ ಕಳ್ಳತನದ ಪ್ರಕರಣ । ಆರೋಪಿಗಳ ಬಂಧನ

# 1.80 ಲಕ್ಷ ರೂಗಳ ಬಂಗಾರ ವಶಕ್ಕೆ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಲಕ್ಷ್ಮೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಎರಡು ಪ್ರತ್ಯೇಕ ಕಳ್ಳತನದ ಪ್ರಕರಣಗಳಿಗೆ ಸಂಬಂಧಿಸಿ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಪಟ್ಟಣದ ಪೊಲೀಸರು ಯಶಸ್ವಿಯಾಗಿದ್ದು, ಅವರಿಂದ 1.80 ಲಕ್ಷ ರೂಗಳ ಬಂಗಾರದ ಆಭರಣಗಳನ್ನು ವಶಪಡಿಸಿಕೊಂಡಿದ್ದು, ಆರೋಪಿಗಳನ್ನು ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸಿದ್ದಾರೆ.

ಆರೋಪಿಗಳು ಕಳೆದ ಡಿಸೆಂಬರ್ ತಿಂಗಳ 20 ಮತ್ತು ಜನವರಿ 23ರಂದು ಬಸ್ ನಿಲ್ದಾಣದಲ್ಲಿ ನಿಂತಿದ್ದ ಮಹಿಳೆಯರಿಂದ ಬಂಗಾರದ ನೆಕ್‌ಲೆಸ್ ಮತ್ತು ಬಂಗಾರದ ಚೈನು ಕಳ್ಳತನ ಮಾಡಿದ್ದರು. ದೂರು ದಾಖಲಾಗುತ್ತಿದ್ದಂತೆ ಪಟ್ಟಣದ ಪೊಲೀಸರು ಖಚಿತ ಮಾಹಿತಿಯೊಂದಿಗೆ ಜ.27ರಂದು ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್‌ನಲ್ಲಿ ಆರೋಪಿಗಳನ್ನು ಹಿಡಿದು ವಿಚಾರಣೆ ಮಾಡಿ ಪ್ರಕರಣಗಳಲ್ಲಿ ಕಳ್ಳತನವಾದ ಬಂಗಾರದ ನೆಕ್‌ಲೆಸ್ ಮತ್ತು ಚೈನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳು ಮಹಾರಾಷ್ಟ್ರ ರಾಜ್ಯದವರಾಗಿದ್ದು, ಸಮೀರ ಶೇಖ ತಂದೆ ಅಮರ ಶೇಖ ಮತ್ತು ಅಧಿಕಾ ಕೋಂ ಅಶೋಕ ಕಾಳೆ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಈ ಎರಡೂ ಪ್ರಕರಣಗಳಲ್ಲಿ ಆರೋಪಿತರ ಪತ್ತೆಗೆ ಪೊಲೀಸ್ ಅಧೀಕ್ಷಕರು, ಹೆಚ್ಚುವರಿ ಪೊಲೀಸ್ ಅಧೀಕ್ಷಕರು. ಡಿ.ಎಸ್.ಪಿ, ಸಿಪಿಐ ನಾಗರಾಜ ಮಾಡಳ್ಳಿ, ಇವರ ಮಾರ್ಗದರ್ಶನದಲ್ಲಿ ಪಿ.ಎಸ್.ಐ ನಾಗರಾಜ ಗಡದ, ಕ್ರೈಂ ವಿಭಾಗದ ಪಿಎಸ್‌ಐ ಟಿ.ಕೆ. ರಾಠೋಡ ಹಾಗೂ ಎ.ಎಸ್.ಐ ಎನ್.ಎ. ಮೌಲ್ವಿ, ಸಿಬ್ಬಂದಿಗಳಾದ ಆರ್.ಎಸ್. ಯರಗಟ್ಟಿ, ಎಮ್.ಎ. ಶೇಖ, ಡಿ.ಎಸ್. ನದಾಫ್, ಎಚ್.ಐ. ಕಲ್ಲಣ್ಣವರ, ಪಾಂಡುರಂಗರಾವ್, ಎ.ಆರ್. ಕಮ್ಮಾರ, ಎಮ್.ಎಸ್ ಬಳ್ಳಾರಿ, ಸಿ.ಎಸ್. ಮಠಪತಿ, ಗುರು ಬೂದಿಹಾಳ, ಸಂಜೀವ ಕೊರಡೂರ, ಮಧುಚಂದ್ರ ಧಾರವಾಡ, ಸೋಮು ವಾಲ್ಮೀಕಿ, ನಂದಯ್ಯ ಮಠಪತಿ ಯಶಸ್ವಿಯಾಗಿದ್ದಾರೆ.



ಸದರಿ ಆರೋಪಿತರನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಹೆಚ್ಚುವರಿ ಎಸ್.ಪಿ, ಡಿ.ಎಸ್.ಪಿ ಅವರು ಅಭಿನಂದಿಸಿದ್ದಾರೆ.

## ಸಂಪಾದಕೀಯ

# ಕಾಂಗ್ರೆಸ್ ಮತ್ತು ಅವಿವೇಕತನ

ಕಷ್ಟವಾದರೂ ಸರಿ ಬಾಂಗ್ಲಾದೇಶದ ಅಕ್ರಮ ನುಸುಳುಕೋರರಿಗೆ ಭಾರತ ಜಾಗ ಕೊಡಬೇಕು ಎನ್ನುವ ಹೇಳಿಕೆ ನೀಡಿರುವ ಗಾಂಧಿ ಕುಟುಂಬದ ಪರಮಾಪ್ತ ಹಾಗೂ ಸಾಗರೋತ್ತರ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಸ್ಯಾಮ್ ಪಿತ್ರೋಡ್ ಮತ್ತೊಂದು ವಿವಾದ ಸೃಷ್ಟಿಸಿದ್ದಾರೆ.

ಅದೇ ರೀತಿ ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಸಹ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನ ಟೀಕಿಸುವ ಭರದಲ್ಲಿ ನೀಡಿದ ಹೇಳಿಕೆ ಮತ್ತೊಂದು ವಿವಾದಕ್ಕೆ ಕಾರಣವಾಗಿದೆ.

ಕಾಂಗ್ರೆಸ್ಸಿನ ಈ ಎರಡು ಹಿರಿತಲೆಗಳು ನೀಡಿರುವ ಹೇಳಿಕೆ ರಾಜಕೀಯ ವಲಯದಲ್ಲಿ ಸಂಚಲನವನ್ನೇ ಸೃಷ್ಟಿಸಿದೆ. ಜಗತ್ತಿನ ನಾನಾ ದೇಶಗಳು ಅಕ್ರಮ ವಲಸೆ ಬಗ್ಗೆ ಗಂಭೀರ ಮತ್ತು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವ ಸಂದರ್ಭದಲ್ಲಿ, ಕಷ್ಟವಾದರೂ ಸರಿ ಅಕ್ರಮವಾಗಿ ನುಸುಳಿದವರಿಗೆ ಜಾಗ ಕೊಡಬೇಕು ಎಂದಿರುವುದು ಅವಿವೇಕತನದ ಹೇಳಿಕೆ.

ಅಕ್ರಮವಾಗಿ ವಲಸೆ ಬಂದವರಿಂದ ಆಗುವ ಸಾಮಾಜಿಕ ಸಮಸ್ಯೆಗಳ ಬಗ್ಗೆ ಪಿತ್ರೋಡ ದೃಷ್ಟಿ ಹರಿಸಿಲ್ಲ. ಸುತ್ತಲೂ ಶತ್ರು ರಾಷ್ಟ್ರಗಳಿಂದಲೇ ಆವೃತವಾಗಿರುವ ಭಾರತದಲ್ಲಿ ಅಕ್ರಮ ವಲಸಿಗರ ಬಗ್ಗೆ ಮೃದು ಧೋರಣೆ ತೋರುವುದು ದೇಶದ ಭದ್ರತೆಯ ದೃಷ್ಟಿಯಿಂದ ಒಪ್ಪುವಂತಹದ್ದಲ್ಲ.

ಇನ್ನು ಮಲ್ಲಿಕಾರ್ಜುನ ಖರ್ಗೆ ನೀಡಿರುವ ಹೇಳಿಕೆಯು ಸಹ ಸಮ್ಮತವಲ್ಲ. ಅಮಿತ್ ಶಾ ತ್ರಿವೇಣಿ ಸಂಗಮದಲ್ಲಿ ಮುಳಗೇಳುವದರಿಂದ ಭಾರತದ ಬಡತನ ನಿರ್ಮೂಲನೆ ಆಗುವುದಿಲ್ಲ. ಅಮಿತ್ ಶಾ ಅಷ್ಟೇ ಅಲ್ಲ, ಕಾಂಗ್ರೆಸ್ಸಿನ ಯಾವ ನಾಯಕರು ಗಂಗಾ ಸ್ನಾನ ಮಾಡಿದರೂ ಭಾರತದ ಬಡತನ ನಿರ್ಮೂಲನೆ ಆಗುವುದಿಲ್ಲ. ಇನ್ನು ಗಂಗಾ ಸ್ನಾನದಿಂದ ಪಾಪ ಪರಿಹಾರ ಅವರವರ ಧಾರ್ಮಿಕ ಭಾವನೆಗೆ ಬಿಟ್ಟದ್ದು.

ದೇಶದ ಬಡತನ ನಿರ್ಮೂಲನೆ ಆಗಬೇಕಾದರೆ ಅಡಳಿತ ಪಕ್ಷಕ್ಕೆ ಪ್ರಾಮಾಣಿಕ ಇಚ್ಛಾಶಕ್ತಿ ಬೇಕು. ವಿರೋಧ ಪಕ್ಷವೂ ಅದೇ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಇದನ್ನ ಅರ್ಥ ಮಾಡಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಇಂತಹ ಕ್ಷುಲ್ಲಕ ಹೇಳಿಕೆಗಳಿಂದಲೇ, ವಿವಾದಗಳನ್ನು ಮತ್ತಷ್ಟು ಮೈಮೇಲೆ ಎಳೆದುಕೊಳ್ಳಬೇಕಾಗುತ್ತದೆ.

### ಶ್ರೀನಿವಾಸ ನಾಯಕರು ಹರಿದಾಸರಾದ ಬಗೆ । ಪುರಂದರದಾಸರ ಪುಣ್ಯತಿಥಿಯ ನಿಮಿತ್ತ ವಿಶೇಷ ಲೇಖನ


# ಆದದ್ದೆಲ್ಲ ಒಳಿತೇ ಆಯಿತು

'ಆದದ್ದೆಲ್ಲ ಒಳಿತೇ ಆಯಿತು' ಎಂಬುದು ಪುರಂದರದಾಸರ ಒಂದು ಪ್ರಸಿದ್ಧ ಕೀರ್ತನೆ ಅಥವಾ ಗೀತೆಯ ಭಾಗವಾಗಿದೆ. ನಮ್ಮ ಬದುಕಿನಲ್ಲಿ ಸಂಭವಿಸಿದ ಪ್ರತಿ ವಿಷಯವು ಭಗವಂತನ ಇಚ್ಛಾನುಸಾರವಾಗಿಯೇ ಆಗಿದ್ದು, ಅದರಿಂದ ಒಳ್ಳೆಯ ಹಾದಿಯೇ ನಮಗೆ ದೊರಕುತ್ತದೆ. ನಮ್ಮ ಜೀವನದ ಪ್ರತಿಯೊಂದು ಘಟನೆಯು ದೇವರ ನಿರ್ಧಾರವನ್ನು ಅನುಸರಿಸಿ ಉತ್ತಮವಾಗಿ ನಡೆಯುತ್ತವೆ. ಪುರಂದರದಾಸರು ದೇವರನ್ನು ನಿಷ್ಠೆ ಹಾಗೂ ಪ್ರೇಮದಿಂದ ಪೂಜಿಸುವ ಅರ್ಥವನ್ನು ಪ್ರತಿಬಿಂಬಿಸುತ್ತದೆ.

ಮುತ್ತುರತ್ನ ವ್ಯಾಪಾರಿ ನವಕೋಟಿ ನಾರಾಯಣರೆಂದೇ ಪ್ರಸಿದ್ಧರಾದ ಶ್ರೀನಿವಾಸ ನಾಯಕರು ಹರಿದಾಸರಾದ ಬಗೆಯ ಕುರಿತು ಕಥೆಯೂ ಸಹ ಅತ್ಯದ್ಭುತವಾಗಿದೆ. ಮುತ್ತು, ರತ್ನ, ವಜ್ರ, ಹವಳ ಅತ್ಯಂತ ಬೆಳೆಬಾಳುವ ಲೋಹಗಳ ವ್ಯಾಪಾರ ಮಾಡುತ್ತಿದ್ದ ವರದಪ್ಪ ನಾಯಕರಿಗೆ ತಿರುಪತಿ ತಿಮ್ಮಪ್ಪನ ಅನುಗ್ರಹದಿಂದ ಹುಟ್ಟಿದ ಮಗುವಿಗೆ ಶ್ರೀನಿವಾಸ ನಾಯಕರೆಂದು ಹೆಸರಿಟ್ಟರು. ಶ್ರೀನಿವಾಸ ನಾಯಕರು ಬೆಲೆಬಾಳುವ ಲೋಹಗಳನ್ನು ಪರೀಕ್ಷೆ ಮಾಡುತ್ತಿದ್ದರು. ಅನೇಕ ರಾಜ ಮಹಾರಾಜರು ಮುತ್ತು ರತ್ನಗಳನ್ನು ಪರೀಕ್ಷಿಸಿ ನಿರ್ಣಯ ಮಾಡಲು ಶ್ರೀನಿವಾಸನಾಯಕರನ್ನೇ ಕರೆಸುತ್ತಿದ್ದರು. ಅಪಾರ ಸಿರಿಸಂಪತ್ತು ಇದ್ದರೂ ಶ್ರೀನಿವಾಸ ನಾಯಕರು ಬಹಳ ಜಿಪುಣರಾಗಿದ್ದರು.

ಒಂದು ದಿವಸ ಭಗವಂತನು ಶ್ರೀನಿವಾಸ ನಾಯಕರನ್ನು ಪರೀಕ್ಷಿಸಲು ಒಬ್ಬ ಬ್ರಾಹ್ಮಣನ ವೇಷದಲ್ಲಿ ಬಂದು ಅಂಗಡಿಯ ಮುಂದೆ ನಿಂತು ತನ್ನ ಮಗನ ಉಪನಯನಕ್ಕೆ ಏನಾದರೂ ಕೊಡಬೇಕೆಂದು ಬೇಡಿಕೊಂಡನು. ಆದರೆ ಶ್ರೀನಿವಾಸ ನಾಯಕ ಬ್ರಾಹ್ಮಣನಿಗೆ ನಾಳೆ ಬಾ ಎಂದು ಹೇಳುತ್ತಾ ಆರು ತಿಂಗಳುಗಳ ಕಾಲ ಸತಾಯಿಸಿದರು. ಆರು ತಿಂಗಳ ನಂತರ ಆ ಬ್ರಾಹ್ಮಣನು ಅಂಗಡಿಯ ಮುಂದೆ ಬಂದುನಿಂತಾಗ ಸವೆದು ಹೋದ ನಾಣ್ಯಗಳನ್ನು ಅವನ ಮುಂದೆ ಸುರಿದ ಶ್ರೀನಿವಾಸ ನಾಯಕ ಅದರಲ್ಲಿ ಒಂದು ದುಡ್ಡು ಮಾತ್ರ ಆರಿಸಿಕೊಂಡು ತೆಗೆದುಕೊಂಡು ಹೋಗಲು ತಿಳಿಸಿದರು.

ಆದರೆ ಆ ಬ್ರಾಹ್ಮಣನು ಅದನ್ನು ತೆಗೆದುಕೊಳ್ಳದೇ ನಗುತ್ತಾ ಹಾಗೆಯೇ ಹೋದನು. ಅದೇ ಬ್ರಾಹ್ಮಣನು ಶ್ರೀನಿವಾಸನಾಯಕನ ಮನೆಗೆ ಬಂದು ಅವರ ಹೆಂಡತಿ ಸರಸ್ವತಿಯ ಹತ್ತಿರ ಬಂದು ಮಗನ ಉಪನಯನಕ್ಕೆ ಏನಾದರೂ ಕೊಡು ಎಂದು ಕೇಳಿದನು. ಮತ್ತು ನನ್ನ ಮಗನ ಉಪನಯನದ ಖರ್ಚಿಗಾಗಿ ನಿನ್ನ ಬಳಿಯಿರುವ ಮೂಗುತ್ತಿಯನ್ನಾದರೂ ನನಗೆ ಕೊಡು ಎಂದು ಕೇಳಿಕೊಂಡಾಗ ಅವಳು ತನ್ನ ಮೂಗುತಿಯನ್ನೇ ತೆಗೆದುಕೊಟ್ಟಳು. ನಂತರ ಬ್ರಾಹ್ಮಣನು ಮತ್ತದೇ ಶ್ರೀನಿವಾಸ ನಾಯಕರ ಅಂಗಡಿಗೆ ಬಂದು ಆ ವಜ್ರದ ಮೂಗುತಿಯನ್ನು ಅಡವಿಟ್ಟು ಹಣ ಕೊಡಲು ಕೇಳಿಕೊಳ್ಳುತ್ತಾರೆ.



ಆಗ ಶ್ರೀನಿವಾಸ ನಾಯಕರು ಇದು ತನ್ನ ಪತ್ನಿಯದೇ ಮೂಗುತಿ ಇರಬಹುದು ಎಂದು ಸಂಶಯ ಬಂದು ತಮ್ಮ ಅಂಗಡಿಯ ಖಜಾನೆಯಲ್ಲಿ ಮೂಗುತಿಯನ್ನು ಭದ್ರವಾಗಿ ಕೀಲಿ ಹಾಕಿಕೊಂಡು ಆ ಬ್ರಾಹ್ಮಣನಿಗೆ ಅಲ್ಲಿಯೇ ಕುಳಿತುಕೊಳ್ಳಲು ತಿಳಿಸಿ ತಮ್ಮ ಮನೆಗೆ ಬಂದರು. ತಕ್ಷಣವೇ ಮನೆಗೆ ಬಂದಾಗ ಹೆಂಡತಿಯ ಮೂಗಿನಲ್ಲಿ ಮೂಗುತಿ ಇಲ್ಲದನ್ನು ನೋಡಿ ನಿನ್ನ ಮೂಗುತಿ ಎಲ್ಲಿ ಹೋಗಿದೆ ಎಂದು ಕೇಳುತ್ತಾರೆ. ಆದರೆ ಅಸಹಾಯಕತೆಯಿಂದ ಅವಳು ಸ್ನಾನ ಮಾಡುವಾಗ ಇಲ್ಲಿಯೇ ತೆಗೆದಿಟ್ಟಿದ್ದೆ ಎಂದು ಸುಳ್ಳು ಹೇಳಿದಾಗ ಅದನ್ನು ತೆಗೆದುಕೊಂಡು ಬರಲು ಅಪ್ಪಣೆ ಮಾಡುತ್ತಾರೆ. ಏನೂ ತೋಚದೇ ನಿಸ್ಸಹಾಯಕಳಾಗಿ ಅವರ ಪತ್ನಿಯು ಒಂದು ಬಟ್ಟಲಿನಲ್ಲಿಚಿವಿಷವನ್ನು ಕುಡಿಯಬೇಕೆಂದುಕೊಂಡಾಗ ಬಟ್ಟಲಿನಲ್ಲಿ ಅದೇ ಮೂಗುತಿಯು ಮೇಲಿನಿಂದ ಬೀಳುತ್ತದೆ. ಇದನ್ನು ಕಂಡು ಆಶ್ಚರ್ಯಚಕಿತಳಾಗಿ ಆ ಮೂಗುತಿಯನ್ನು ಶ್ರೀನಿವಾಸ ನಾಯಕರಿಗೆ ತಂದು ಕೊಡುತ್ತಾಳೆ. ಶ್ರೀನಿವಾಸ ನಾಯಕರು ತಕ್ಷಣವೇ ತಮ್ಮ ಅಂಗಡಿಯ ಖಜಾನೆ ತೆರೆದು ನೋಡಿದಾಗ ಆ ಮೂಗುತಿಯೂ ಇರುವುದಿಲ್ಲ. ಅಲ್ಲಿ ಕುಳಿತುಕೊಂಡಿದ್ದ ಬ್ರಾಹ್ಮಣನೂ ಸಹ ಮಾಯವಾಗಿರುತ್ತಾನೆ. ಆಗ ಶ್ರೀನಿವಾಸ ನಾಯಕರಿಗೆ ಭಗವಂತನೇ ತನ್ನನ್ನು ಪರೀಕ್ಷಿಸಲು ಬ್ರಾಹ್ಮಣನ ವೇಷದಲ್ಲಿ ಬಂದಿದ್ದು ಎಂದು ಜ್ಞಾನೋದಯವಾಗುತ್ತದೆ.

ಆಗ ತಮ್ಮಲ್ಲಿರುವ ಸಿರಿ ಸಂಪತ್ತೆಲ್ಲವನ್ನು ದಾನ ಮಾಡಿ ಅವರು ಹರಿದಾಸರಾದರು. ವ್ಯಾಸರಾಜರ ಬಳಿಗೆ ಶಿಷ್ಯತ್ವವನ್ನು ಪಡೆದುಕೊಂಡು ಪುರಂದರ ದಾಸರೆಂದೇ ಪ್ರಸಿದ್ಧರಾದರು. ಶ್ರೀ ಕೃಷ್ಣನ ಅನನ್ಯ ಭಕ್ತರಾದ ಪುರಂದರ ದಾಸರು 4,75,000 ಭಕ್ತಿ ಗೀತೆಗಳನ್ನು ರಚಿಸಿದರು. ಭಕ್ತಿ ಗೀತೆ, ಸುಳಾದಿ, ಮುಂಡಿಗೆ, ಕೀರ್ತನೆಗಳ ಮೂಲಕ ಸಮಾಜದಲ್ಲಿನ ಅಂಕುಡೊಂಕು ತಿದ್ದುವ ಕೆಲಸ ಮಾಡಿದರು.

ಕೆರೆಯ ನೀರನ್ನು ಕೆರೆಗೆ ಚೆಲ್ಲಿರೋ ಎಂದರೆ ಹರಿಯ ಕರುಣೆಯಿಂದ ಬಂದ ಭಾಗ್ಯವನ್ನು ಹರಿಗೆ ಸಮರ್ಪಿಸಬೇಕು ಎಂದು ಲೋಕಕಲ್ಯಾಣಕ್ಕಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡರು. ಕರ್ನಾಟಕ ಸಂಗೀತದ ಮಹಾನ್ ಗುರು ಮತ್ತು ವೈಷ್ಣವ ಭಕ್ತರಾದವರು. ಭಕ್ತಿ ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. ಪುರಂದರದಾಸರು ತಮ್ಮ ಭಕ್ತಿಗೀತೆಗಳು ಮತ್ತು ಪ್ರಭಾತ ರಾಗದಲ್ಲಿ ಹಾಡುಗಳನ್ನು ರಚಿಸಿ ಆಧ್ಯಾತ್ಮಿಕ ಜ್ಞಾನವನ್ನು ಎಲ್ಲೆಡೆ ಪಸರಿಸಿದರು.

ಜಗತ್ತಿನಲ್ಲಿರುವ ಅನೇಕ ಜೀವಿಗಳ ಹಾಗೂ ಮನುಷ್ಯನ ಸೃಷ್ಟಿ ಮಾಡಿರುವವನೇ ಭಗವಂತನಾಗಿದ್ದಾರೆ. ಆದಕಾರಣ ಮಾನವ ಜನುಮ ದೊಡ್ಡದು. ಅದನು ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ ಎಂದು ಹೇಳುತ್ತಾ ದೇವರು ಕೊಟ್ಟ ಈ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಹೀಗೆ ಪ್ರಸಂಗಾನುಭವದಿಂದ ತಮ್ಮ ಅಪರೋಕ್ಷ ಜ್ಞಾನದಿಂದಲೇ ಅನೇಕ ಕೃತಿಗಳನ್ನು ರಚಿಸಿದ ಪುರಂದರಾಸರು ಪ್ರತಿಯೊಬ್ಬ ಮನುಷ್ಯನು ಜೀವನದಲ್ಲಿ ವಿವಿಧ ಹಂತಗಳಲ್ಲಿ ತನಗೆದುರುಗುವ ಸಮಸ್ಯೆಗಳಿಗೆ, ಸವಾಲುಗಳಿಗೆ ಭಗವಂತನ ನಾಮಸ್ಮರಣೆ ಮಾಡುತ್ತಾ ತಮ್ಮ ತಮ್ಮ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಬೇಕು ಹಾಗೂ ಜೀವನ ಸಾರ್ಥಕ ಪಡಿಸಿಕೊಳ್ಳಬೇಕೆಂದು ಜಗತ್ತಿಗೆ ತಿಳಿಸಿಕೊಟ್ಟಿದ್ದಾರೆ. ಮಾನವ ಕುಲಕೋಟಿಗೆ ಭಕ್ತಿ ಹಾಗೂ ಜ್ಞಾನದ ಕೊಡುಗೆ ನೀಡಿದ ಪುರಂದರ ದಾಸರು ಕ್ರಿ.ಶ.1565ರಲ್ಲಿ ಇಹಲೋಕ ತ್ಯಜಿಸಿದರು.

**– ಅಂಜನಾ ರಾಘವೇಂದ್ರ ಕುಬೇರ. ಗದಗ.**

# ಗುತ್ತಿಗೆದಾರ ಸಚಿನ್ ಕುಟುಂಬಕ್ಕೆ ಭದ್ರತೆ ನೀಡಿ



**■ ವಿಜಯಸಾಕ್ಷಿ ಸುದ್ದಿ, ಗದಗ**

ಬೀದರ್‌ನಲ್ಲಿ ಗುತ್ತಿಗೆದಾರ ಸಚಿನ್ ಅವರ ಆತ್ಮಹತ್ಯೆಯನ್ನು ಖಂಡಿಸಿ ನಗರದ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಗದಗ ಜಿಲ್ಲಾ ಘಟಕ ವತಿಯಿಂದ ಗದಗ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ಮನವಿ ಸಲ್ಲಿಸಲಾಯಿತು.

ಮಹಾಸಭಾದ ಅಧ್ಯಕ್ಷ ದೇವೇಂದ್ರಪ್ಪ ಬಡಿಗೇರ ಮಾತನಾಡಿ, ಪ್ರಥಮ ದರ್ಜೆ ಗುತ್ತಿಗೆದಾರರಾದ ಸಚಿನ್ ಪಂಚಾಳರವರ ನಿಗೂಢವಾಗಿ ಸಾವನಪ್ಪಿರುವುದು ಸಂಶಯಾಸ್ಪದವಾಗಿದೆ. ಸರಕಾರ ಕೂಡಲೇ ಎಚ್ಚೆತ್ತು ಸಂತ್ರಸ್ತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಅವರ ಕುಟುಂಬ ವರ್ಗಕ್ಕೆ ಸೂಕ್ತ ಭದ್ರತೆ ನೀಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರಾಮಣ್ಣ ಶಂ.ಕಮ್ಮಾರ, ದಿವಾಕರ ಬಡಿಗೇರ, ಮೃತ್ಯುಂಜಯ ಬಡಿಗೇರ, ಮೌನೇಶ ಬಡಿಗೇರ, ವೀರಭದ್ರಪ್ಪ ಕಮ್ಮಾರ, ಕಾಳಪ್ಪ ಬಡಿಗೇರ, ದೇವಪ್ಪ ಬಡಿಗೇರ, ಅಶೋಕ ಕಮ್ಮಾರ, ಕಾಳಪ್ಪ ಬಡಿಗೇರ ಯಳವತ್ತಿ, ವೀರಣ್ಣ ಬಡಿಗೇರ, ಮೌನೇಶ ಪತ್ತಾರ, ಮಹೇಶ ಬಡಿಗೇರ, ಹನುಮಂತಪ್ಪ ಬಡಿಗೇರ, ಆನಂದ ಕಮ್ಮಾರ, ಕೇಶಪ್ಪ ಕಮ್ಮಾರ, ಕಲ್ಲಪ್ಪ ಪತ್ತಾರ, ಶರಣಬಸಪ್ಪ ಬಡಿಗೇರ, ಬಸವರಾಜ ಕಮ್ಮಾರ, ಮಹಾಲಿಂಗಪ್ಪ ಬಡಿಗೇರ, ನಾಗಲಿಂಗಪ್ಪ ಬಡಿಗೇರ, ವಿರೇಶ ಬಡಿಗೇರ, ಶೇಖಪ್ಪ ಪತ್ತಾರ, ಶಿವಪ್ಪ ಶಿರೂರ, ಮಂಜುನಾಥ ಬಡಿಗೇರ, ಮಾನಪ್ಪ ಬಡಿಗೇರ, ಚಂದ್ರಶೇಖರ ಪತ್ತಾರ, ಈರಣ್ಣ ಕಂಚಗಾರ, ದೇವಪ್ಪ ಬಡಿಗೇರ ಮುಂತಾದವರು ಉಪಸ್ಥಿತರಿದ್ದರು.

# ಜನ್ಮದಿನದ ನಿಮಿತ್ತ ಗೋಪೂಜೆ



**■ ವಿಜಯಸಾಕ್ಷಿ ಸುದ್ದಿ, ಗದಗ**

ಬಿಜೆಪಿ ಪಕ್ಷದ ಒಬಿಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಸುಧೀರ್ ಕಾಟಿಗರ ಅವರ 43ನೇ ವರ್ಷದ ಜನ್ಮದಿನವನ್ನು ರವಿವಾರ ಗದಗ ನಗರದ ಮಹಾವೀರ ಗೋಶಾಲೆಯಲ್ಲಿ ಸುಧೀರ್ ಕಾಟಿಗಾರ ಗೆಳೆಯರ ಬಳಗದ ವತಿಯಿಂದ ಗೋಮಾತೆಗೆ ಪೂಜೆ ಮಾಡುವ ಮೂಲಕ ಆಚರಿಸಿದರು.

ಈ ಸಂದರ್ಭದಲ್ಲಿ ಉದ್ಯಮಿ ಪಾಂಡುರಂಗಸಾ ಕಬಾಡಿ ಮಾತನಾಡಿ, ಈಗಿನ ದಿನಮಾನಗಳಲ್ಲಿ ಯುವ ಜನತೆ ಹುಟ್ಟುಹಬ್ಬದ ನೆಪದಲ್ಲಿ ಪಾರ್ಟಿ ಮೋಜು-ಮಸ್ತಿಗಳನ್ನು ಮಾಡುತ್ತಾ ದುಶ್ಚಟಗಳಿಂದ ತಮ್ಮ ಜೀವನ ಹಾಳುಮಾಡಿಕೊಳ್ಳುತ್ತಿರುವದು ಕಳವಳಕಾರಿ ವಿಷಯವಾಗಿದೆ. ಗೋಮಾತೆಯ ಉದರದಲ್ಲಿ ಮುಕ್ಕೋಟಿ ದೇವತೆಗಳು ನೆಲೆಸಿರುತ್ತಾರೆ ಎಂಬುದು ಭಾರತೀಯರ ನಂಬಿಕೆ. ಇಂತಹ ಗೋಮಾತೆಯ ಹಾಲು ಅಮೃತಕ್ಕೆ ಸಮ. ಗೋಮಾತೆಯನ್ನು ರಕ್ಷಿಸಿಕೊಳ್ಳುವ ಜವಾಬ್ದಾರಿ ನಮ್ಮ ಯುವ ಜನತೆಯ ಮೇಲಿದೆ ಎಂದರು.

ಈ ಸಂದರ್ಭದಲ್ಲಿ ಏಕನಾಥ ಕಾಟಿಗರ, ಹಿರಿಯರಾದ ಸೋಮನಾಥಸಾ ಧರ್ಮದಾಸ್, ರಾಜು ಕಾಟಿಗಾರ, ರವಿ ಚವ್ಹಾಣ, ಪ್ರಶಾಂತ್ ಖಾಟ್ವಾ, ನೇಮಚಂದ್ ಪವಾರ್, ಶ್ರೀಕಾಂತ್ ಪವಾರ್, ಪ್ರಕಾಶ ಕಾಟಿಗಾರ, ಭರತ್ ಮಾರೆಪ್ಪನವರ್, ಶ್ರೀನಿವಾಸ ಭಾಂಡಗೆ, ತುಕಾರಾಮ ನಾಕೋಡ್, ಮಯೂರ್ ಕಾಟಿಗರ, ರಾಹುಲ್ ಚವ್ಹಾಣ, ಗಜು ಲದ್ವಾ, ನಾರಾಯಣ ಟಿಕಣ್ದಾರ ಮುಂತಾದವರು ಇದ್ದರು.

### ಸಹಕಾರ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ. ಪಾಟೀಲ ಕಳವಳ

# ಮೈಕ್ರೋ ಫೈನಾನ್ಸ್‌ಗಳ ನಿಯಂತ್ರಣ ಕಾನೂನಿಗೆ ಚಿಂತನೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ಸಹಕಾರ ಕ್ಷೇತ್ರವು ಇಂದು ತನ್ನ ಕ್ಷೇತ್ರವನ್ನು ವಿಸ್ತಾರ ಮಾಡಿಕೊಳ್ಳದ ಕಾರಣ ಕಾರ್ಪೋರೇಟ್ ಸಂಸ್ಥೆಗಳು, ಅನಧಿಕೃತ ಫೈನಾನ್ಸ್ ಕಂಪನಿಗಳು ಬೃಹದಾಕಾರವಾಗಿ ಬೆಳೆಯುತ್ತಿರುವ ಪರಿಣಾಮ ದೇಶದ ಮತ್ತು ರಾಜ್ಯದ ಆರ್ಥಿಕ ಕ್ಷೇತ್ರ ಹಿಂಸಾತ್ಮಕ ವಾತಾವರಣವಾಗಿ ಬದಲಾಗುತ್ತಿದೆ ಎಂದು ಕಾನೂನು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅವರು ಕಳವಳ ವ್ಯಕ್ತಪಡಿಸಿದರು.

ನಗರದ ಹುಬ್ಬಳ್ಳಿ ರಸ್ತೆಯ ಗದಗ ಕೋ ಆಪ್ ಇಂಡಸ್ಟ್ರಿಯಲ್ ಎಸ್ಟೇಟ್ ಆವರಣದಲ್ಲಿನ ತಿರಂಗ ಪಾರ್ಕ್‌ನಲ್ಲಿ ಗದಗ ಪರಿಸರದ ಸಹಕಾರಿಗಳು ಹಮ್ಮಿಕೊಂಡಿದ್ದ ಸಹಕಾರ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮೈಕ್ರೋ ಫೈನಾನ್ಸ್‌ಗಳು ಇಂದು ಜನರನ್ನು ಹಿಡಿದು, ಹೊಡೆದು ಸಾಲ ವಸೂಲಿ ಮಾಡುವುದು, ಬಂದೂಕು ಹಿಡಿದು ಬೆದರಿಕೆ ಹಾಕುವುದು ಮಾಡುತ್ತಿರುವುದರಿಂದ ಸಾಲ ಪಡೆದವರು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುತ್ತಿರುವುದು ಖೇದಕರ ವಿಷಯವಾಗಿದೆ. ಆದ್ದರಿಂದ, ಜೋರು ಮಾಡಿ ಹಣ ವಸೂಲಿ ಮಾಡುವವರಿಗೆ, ಅಮಾನವೀಯವಾಗಿ ಹಣ ವಸೂಲಿ ಮಾಡುವವರಿಗೆ ಅಂಕುಶದ ಜೊತೆಗೆ ಮಟ್ಟ ಹಾಕಲು ಸರಕಾರ ಕಾನೂನು ತರಲು ಚಿಂತನೆ ನಡೆಸಿದೆ ಎಂದು ಹೇಳಿದರು.



> ಜನರ ಕಲ್ಯಾಣಕ್ಕಾಗಿ ಸಹಕಾರ ಕ್ಷೇತ್ರವನ್ನು ವಿಸ್ತರಿಸುವಲ್ಲಿ ಸಹಕಾರಿಗಳು ಧೈರ್ಯದಿಂದ ಹೊಸ ವಾತಾವರಣವನ್ನು ನಿರ್ಮಿಸಬೇಕಿದೆ. ಯಾರಿಗೆ ಹಣಕಾಸಿನ ಅವಶ್ಯಕತೆಯಿದೆಯೋ ಅಂತವರನ್ನು ಹುಡುಕಿಕೊಂಡು ಸಾಲ ಕೊಡುವಂತಾಗಲು ಸಹಕಾರಿಗಳು ಕರ್ತವ್ಯ ನಿರ್ವಹಿಸಬೇಕಿದೆ.
>
> **– ಎಚ್.ಕೆ. ಪಾಟೀಲ. ಸಚಿವರು, ಗದಗ.**

ಇಂದಿನ ದಿನಮಾನದಲ್ಲಿ ಸಹಕಾರ ಕ್ಷೇತ್ರದಲ್ಲಿ ಲಾಭವಿಲ್ಲದ ಕಾರಣ ಯುವಜನತೆ ಸಹಕಾರ ಕ್ಷೇತ್ರದಲ್ಲಿ ಬರಲು ಹಿಂದೇಟು ಹಾಕುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಹಿರಿಯರೆಲ್ಲರೂ ಸೇವೆಗೆ ಕೀರ್ತಿಯನ್ನು ಅಪೇಕ್ಷೆ ಮಾಡುತ್ತಿದ್ದ ಪರಿಣಾಮ ದೊಡ್ಡ ಮನುಷ್ಯರಾಗುತ್ತಿದ್ದರು. ಆದರೆ, ಇಂದು ಪ್ರತಿಯೊಬ್ಬರೂ ಸೇವೆಗೆ ಕೀರ್ತಿಯನ್ನು ಅಪೇಕ್ಷೆ ಮಾಡದೆ ಲಾಭವನ್ನು ನಿರೀಕ್ಷಿಸುತ್ತಿದ್ದಾರೆ. ಅದರ ಪರಿಣಾಮ ಸಹಕಾರ ಕ್ಷೇತ್ರದ ತನ್ನ ವ್ಯಾಪ್ತಿಯನ್ನು ಕ್ಷೀಣಿಸಿಕೊಳ್ಳುತ್ತಿದೆ ಎಂದು ಹೇಳಿದರು.

ಗದಗದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಆರಂಭಿಸುವಾಗ ಇದೊಂದು ಯಶಸ್ವಿ ಪ್ರಯೋಗ ಆಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಇಂದು ಹಲವಾರು ಉದ್ಯಮಿಗಳು ಸಹಕಾರಿ ಮನೋಭಾವನೆ ಹೊಂದಿ ಯಶಸ್ವಿಯಾಗಿರುವುದನ್ನು ನೋಡಿದಾಗ ಹೆಮ್ಮೆ, ಅಭಿಮಾನ ಉಂಟಾಗುತ್ತದೆ. ಸ್ಥಳೀಯ ಉದ್ಯಮಿಗಳು ಹೊಸ ಪೀಳಿಗೆಯನ್ನು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಲು ಸಿದ್ಧಮಾಡಿದರೆ ಸಹಕಾರಿ ಕ್ಷೇತ್ರಕ್ಕೆ ಬಹುದೊಡ್ಡ ಲಾಭವಾಗುತ್ತದೆ ಎಂದು ವಿನಂತಿಸಿದರು.

## ಸನ್ಮಾನ

ಸಹಕಾರ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಾಗೂ ಸರಕಾರದಿಂದ 'ಸಹಕಾರ ರತ್ನ' ಪ್ರಶಸ್ತಿಗೆ ಭಾಜನರಾದ ಕೆ.ಎಲ್. ಪಾಟೀಲ, ಎಚ್.ಜಿ. ಹಿರೇಗೌಡರ, ಶಂಕರಣ್ಣ ಮುನವಳ್ಳಿ ಹಾಗೂ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಹನುಮಾನಸಿಂಗ್ ಜಮಾದಾರ ಅವರನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕ ಡಿ.ಆರ್. ಪಾಟೀಲ ಮಾತನಾಡಿ, ಗದಗ ಸಹಕಾರಿ ರಂಗದ ತೊಟ್ಟಿಲು. ಈ ತೊಟ್ಟಿಲಿನಿಂದ ಬೆಳೆದು, ಸಹಕಾರಿ ರಂಗವನ್ನು ಬೆಳೆದವರನ್ನು ಸನ್ಮಾನಿಸಿವುದು ಖುಷಿಯ ಸಂಗತಿಯಾಗಿದೆ. ಕೆ.ಎಲ್. ಪಾಟೀಲ ಅವರು ಹುಬ್ಬಳ್ಳಿಯ ರೆಡ್ಡಿ ಸಹಕಾರಿ ಬ್ಯಾಂಕ್‌ನ ಚೇರಮನ್‌ರಾಗಿ ಮೂರು ದಶಕಗಳ ಕಾಲ ಸಂಸ್ಥೆಯ ಬೆಳವಣಿಗೆಗೆ ಸೇವೆ ಸಲ್ಲಿಸಿರುವುದು ಹೆಮ್ಮೆಯ ಸಂಗತಿ. ಶಂಕರಣ್ಣ ಮುನವಳ್ಳಿ ಅವರು ಮೊದಲಿನಿಂದಲೂ ವ್ಯಾಪಾರ, ಶೈಕ್ಷಣಿಕ ಹಾಗೂ ಸಹಕಾರಿ ರಂಗದಲ್ಲಿ ಕೆಲಸ ಮಾಡಿದ್ದಾರೆ. ಕೆಎಲ್‌ಇ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ಎಚ್.ಜಿ. ಹಿರೇಗೌಡ್ರ ಅವರು ಕೆಎಂಎಫ್ ನಿರ್ದೇಶಕರಾಗಿ, ಪಶುಪಾಲಕರಿಗೆ ಅನುಕೂಲ ಕಲ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹನುಮಾನಸಿಂಗ್ ಜಮಾದಾರ ಅವರು ಉತ್ತಮ ಬರಹಗಾರರಾಗಿದ್ದು, ಪತ್ರಿಕೋದ್ಯಮ ಕ್ಷೇತ್ರದಲ್ಲಿ ಮತ್ತಷ್ಟು ಎತ್ತರದ ಸ್ಥಾನಕ್ಕೇರಲಿ ಎಂದು ಹಾರೈಸಿದರು. ಎಚ್.ಜಿ. ಹಿರೇಗೌಡರ ಮಾತನಾಡಿ, ರಾಜ್ಯವು ಹೈನುಗಾರಿಕೆ ಕ್ಷೇತ್ರದಲ್ಲಿ ಸಾಕಷ್ಟು ಮುಂದಿದ್ದರೂ, ಗುಣಮಟ್ಟದಲ್ಲಿ ಹಿಂದೆ ಉಳಿದಿದ್ದೇವೆ. ಹಾಲು ಉತ್ಪಾದಕ ಕ್ಷೇತ್ರದಿಂದ ರೈತರು ಅಭಿವೃದ್ಧಿ ಹೊಂದಲು ಸಾಧ್ಯವಾಗಿದ್ದು, ಹೈನು ಉತ್ಪಾದನೆ ಕ್ಷೇತ್ರ ಇನ್ನಷ್ಟು ಪ್ರಗತಿ ಸಾಧಿಸಬೇಕಿದೆ ಎಂದರು. ಜಿ.ಪಂ ಮಾಜಿ ಅಧ್ಯಕ್ಷ ವಾಸಣ್ಣ ಕುರಡಗಿ, ಸಿದ್ದು ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಚಿ, ಬಿ.ಬಿ. ಅಸೂಟಿ, ಅಶೋಕ ಮಂದಾಲಿ, ಏಕನಾಥ ನಾಗನೂರ, ಬಸು ತಿರ್ಲಾಪೂರ, ಮೋಹನ ದುರಗಣ್ಣವರ, ಪ್ರಭು ದಂಡಾವತಿಮಠ, ಶಶಿ ಪಾಟೀಲ, ಪ್ರಕಾಶ ಬೊಮ್ಮನಹಳ್ಳಿ, ರಂಗನಗೌಡ ಓದುಗೌಡರ, ಎಂ.ಆರ್. ಪಾಟೀಲ, ಬಸಲಿಂಗಪ್ಪ ಮುಂಡರಗಿ ಸೇರಿ ಮಾಜಿ ಸೈನಿಕರು, ಗದಗ ಪರಿಸರದ ಸಹಕಾರಿಗಳು ಸೇರಿ ಅನೇಕರು ಹಾಜರಿದ್ದರು. ನಿವೃತ್ತ ಪ್ರಾಚಾರ್ಯ ಅನಿಲ್ ವೈದ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೃಷ್ಣಗೌಡ ಎಚ್.ಪಾಟೀಲ ಸ್ವಾಗತಿಸಿದರು. ಮಧುಸೂದನ ಪುಣೇಕರ, ಆನಂದ ಪೋತ್ನಿಸ್ ಪರಿಚಯಿಸಿದರು. ಜಿ.ಕೆ. ಆದಪ್ಪಗೌಡರ ವಂದಿಸಿದರು.

### ರಾಜ್ಯದ ಸ್ತಬ್ಧಚಿತ್ರ ಬೆಂಬಲಿಸಲು ಹೇಮಂತ್ ನಿಂಬಾಳ್ಕರ್ ಮನವಿ


# ಲಕ್ಕುಂಡಿ ಸ್ತಬ್ಧಚಿತ್ರಕ್ಕೆ ಓಟ್ ಮಾಡಿ

**■ ವಿಜಯಸಾಕ್ಷಿ ಸುದ್ದಿ, ನವದೆಹಲಿ**

ದೆಹಲಿಯಲ್ಲಿ ಜನವರಿ 26ರಂದು ನಡೆದ 76ನೇ ಗಣರಾಜ್ಯೋತ್ಸವದ ಅಂಗವಾಗಿ ಪಥ ಸಂಚಲನದಲ್ಲಿ ಭಾಗವಹಿಸಿದ್ದ ವಿವಿಧ ರಾಜ್ಯಗಳ ಸ್ತಬ್ಧಚಿತ್ರಗಳನ್ನು ಜನಾಭಿಪ್ರಾಯ ಆಧರಿಸಿ ಪ್ರಶಸ್ತಿಗೆ ಪರಿಗಣಿಸಲು ಕೇಂದ್ರ ಸರ್ಕಾರದ ರಕ್ಷಣಾ ಸಚಿವಾಲಯವು ಆನ್‌ಲೈನ್‌ನಲ್ಲಿ ಓಟ್ ಮಾಡಲು ಅವಕಾಶ ಕಲ್ಪಿಸಿದೆ.

ಈ ಬಾರಿ ಕರ್ನಾಟಕವು 'ಲಕ್ಕುಂಡಿ: ಶಿಲ್ಪಕಲೆಯ ತೊಟ್ಟಿಲು' ಸ್ತಬ್ಧಚಿತ್ರದೊಂದಿಗೆ ಭಾಗವಹಿಸಿತ್ತು. ಅಪಾರ ಜನರ ಮೆಚ್ಚುಗೆಗೆ ಪಾತ್ರವಾಗಿರುವ ನಮ್ಮ ರಾಜ್ಯದ ಸ್ತಬ್ಧಚಿತ್ರವನ್ನು ಓಟ್ ಮಾಡಿ ಬೆಂಬಲಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಮನವಿ ಮಾಡಿದ್ದಾರೆ.

ಕೇಂದ್ರ ಸರ್ಕಾರವು ಅತ್ಯುತ್ತಮ ಸ್ತಬ್ಧಚಿತ್ರದ ಆಯ್ಕೆಗಾಗಿ ಸಾರ್ವಜನಿಕರು ಆನ್‌ಲೈನ್, ಇಮೇಲ್ ಮತ್ತು ಎಸ್‌ಎಂಎಸ್ ಮೂಲಕ ಓಟ್ ಮಾಡಲು ಅವಕಾಶ ಕಲ್ಪಿಸಿದೆ. ಜನವರಿ 28ರ ಮಧ್ಯರಾತ್ರಿ 12ರವರೆಗೆ ಓಟ್ ಮಾಡಲು ಅವಕಾಶವಿದೆ.



ಸಾರ್ವಜನಿಕರು ನಿಗದಿತ ಅವಧಿಯೊಳಗೆ ಓಟ್ ಮಾಡಿ ರಾಜ್ಯದ ಸ್ತಬ್ಧಚಿತ್ರವನ್ನು ಬೆಂಬಲಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

> ಓಟ್ ಮಾಡುವ ವಿಧಾನದ ಬಗ್ಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕಿರುಚಿತ್ರವನ್ನು ಸಹ ಬಿಡುಗಡೆಗೊಳಿಸಿದೆ. ಇದನ್ನು ಅನುಸರಿಸಿ, ಐಚಿಇಾಇಾಣಟಿಜು ಅಡಿಚಿಜಟಜ ಠಜ, ಣಂಟಿಜ ಅಡಿಚಿಜಿಣ ವಿಷಯದ ಸ್ತಬ್ಧಚಿತ್ರಕ್ಕೆ ಹೆಚ್ಚು ಹೆಚ್ಚು ಓಟ್ ಮಾಡುವ ಮೂಲಕ ಬೆಂಬಲ ಹಾಗೂ ಮೆಚ್ಚುಗೆ ಸೂಚಿಸಬೇಕೆಂದೂ ಎಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

https://www.mygov.in/group-poll/vote-your-favourite-tableau-and-marching-contingent-republic-day-parade-2025/ ಕೊಂಡಿಯನ್ನು ಕ್ಲಿಕ್ ಮಾಡಿ, ಐಂರುಟಿ ಣಂ participate ಮೇಲೆ ಕ್ಲಿಕ್ ಮಾಡಿ, ತಮ್ಮ ನೋಂದಾಯಿತ ಮೊಬೈಲ್ ನಂಬರ್ ಅಥವಾ ಇಮೇಲ್ ವಿವರ ನಮೂದಿಸಿ, ತಾವು ಸ್ವೀಕರಿಸುವ ಒಟಿಪಿ ನಮೂದಿಸಿ, ನಂತರ Resend. OTP/ Submitted ಇದರಲ್ಲಿ submitt ಕ್ಲಿಕ್ ಮಾಡಿ, ಎಲ್ಲಾ ಸ್ತಬ್ಧಚಿತ್ರಗಳ ಮಾಹಿತಿ ಕಾಣುತ್ತದೆ.

Lakkundi : cradle of stone craft ಕ್ಲಿಕ್ ಮಾಡಿ ತಮ್ಮ ಮತವನ್ನು ದಾಖಲಿಸಬಹುದು.

ತಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯಿಂದ MYGOVPOLL 357037,12 ಟೈಪ್ ಮಾಡಿ 7738299899 ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಮೂಲಕ ಓಟ ಮಾಡಬಹುದಾಗಿದೆ.

# ಕೈಲಾಸ ಆಶ್ರಮದಿಂದ ಭಕ್ತರ ಬದುಕಿನಲ್ಲಿ ಬದಲಾವಣೆ

▶▶ ಮೊದಲನೇ ಪುಟದಿಂದ

ಆದರೆ, ನಡೆಗಳಿಲ್ಲ. ಅತೀಂದ್ರಿಯ ಜ್ಞಾನ ಮತ್ತು ಅನುಭಾವದ ಮೇಲೆ ನಮ್ಮ ದೇಶದ ಆಧ್ಯಾತ್ಮಿಕತೆ ನಿಂತಿದೆ. ಇಂದ್ರಿಯಾತೀತ ಅಧ್ಯಯನವನ್ನು ಪ್ರತಿಯೊಬ್ಬರೂ ಮಾಡಬೇಕು. ರೂಪ, ರಸ, ಗಂಧ, ಶಕ್ತಗಳನ್ನು ಅನುಭವಿಸುತ್ತೇವೆ. ಆದರೆ, ಇಂದ್ರಿಯಾತೀತ ಆತ್ಮವನ್ನು ಯಾರೂ ಅನುಭವಿಸಲು ಸಾಧ್ಯವಿಲ್ಲ ಎಂದರು. ಕಾರ್ಯಕ್ರಮವನ್ನುದ್ದೇಶಿಸಿ ಪೂರ್ಣಾನಂದ ಪುರಿ ಸ್ವಾಮೀಜಿ ಮಾತನಾಡಿ, ಸಮಾಜದಲ್ಲಿನ ಅಶಾಂತಿಗೆ ಸಂಸ್ಕಾರದ ಕೊರತೆ ಮೂಲ ಕಾರಣವಾಗಿದೆ. ತ್ರೇತಾಯುಗದಲ್ಲಿ ರಾಮ, ಲಕ್ಷ್ಮಣ, ಶತ್ರುಘ್ನರ ಕಾಲದಲ್ಲಿ ಅಣ್ಣನಿಗಾಗಿ ತ್ಯಾಗ ಮಾಡುತ್ತಿದ್ದರು. ಈ ಕಲಿಯುಗದಲ್ಲಿ ತಮ್ಮನ ಏಳಿಗೆಗಾಗಿ ಅಣ್ಣ ಸಂಪೂರ್ಣ ಅಧಿಕಾರ ತ್ಯಾಗ ಮಾಡಿ ಶ್ರಮಿಸುತ್ತಿದಾರೆಂದು ಡಿ.ಆರ್. ಪಾಟೀಲ ಹಾಗೂ ಹೆಚ್.ಕೆ. ಪಾಟೀಲರ ಸಹೋದರತ್ವದ ಬಗ್ಗೆ ಗುಣಗಾನ ಮಾಡಿದರು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಕೈಲಾಸ ಆಶ್ರಮದ ಆಚಾರ್ಯ ಜಗದ್ಗುರು ಜಯೇಂದ್ರಪುರಿ ಮಹಾಸ್ವಾಮಿಗಳು ವಹಿಸಿಕೊಂಡಿದ್ದರು. ಈ ವೇಳೆ ಶಿವಾನಂದ ಮಠದ ಶ್ರೀ ಶಿವಾನಂದ ಮಹಾಸ್ವಾಮೀಜಿ, ಶಿರಹಟ್ಟಿ ಮಠದ ಜಗದ್ಗುರು ಫಕ್ಕಿರೇಶ್ವರ ಮಹಾಸ್ವಾಮೀಜಿ, ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ, ಶ್ರೀ ಪೂರ್ಣಾನಂದ ಪುರಿ ಸ್ವಾಮೀಜಿ, ಬೆಂಗಳೂರಿನ ನರೇಂದ್ರ ಪ್ರೊ. ಶಿವರಾಜ್, ಹಾಸನದ ಪುಟ್ಟೇಗೌಡ್ರ, ಮಾಜಿ ಶಾಸಕ ಡಿ.ಆರ್ ಪಾಟೀಲ, ಜಿ.ಎಸ್ ಗಡ್ಡದೇವರಮಠ, ರಾಮಣ್ಣ ಲಮಾಣಿ ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2024–2025ನೇ ಸಾಲಿನ ಶೇ 24.10% ಯೋಜನೆಯ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ನಗರಸಭೆ ನಿಧಿಯ ಅನುದಾನದಡಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲ್ಯಾಪ್‌ಟಾಪ್ ಖರೀದಿಸಲು ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಫೆಬ್ರವರಿ 12 ಕೊನೆಯ ದಿನವಾಗಿದೆ. ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗದಗ–ಬೆಟಗೇರಿ ನಗರಸಭೆಯ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ.

**ಶಿವಾಜಿ ಮಹಾರಾಜ ಜಯಂತ್ಯುತ್ಸವ–2025ರ ಪೂರ್ವಭಾವಿ ಸಭೆ | ಅಧ್ಯಕ್ಷರಾಗಿ ವಿರೂಪಾಕ್ಷಪ್ಪ ಎಮ್.ಹೆಬ್ಬಳ್ಳಿ ಆಯ್ಕೆ**

# ನಗರದ ಶಿವಾಜಿ ಜಯಂತ್ಯುತ್ಸವ ರಾಜ್ಯದಲ್ಲಿಯೇ ಹೆಸರುವಾಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಛತ್ರಪತಿ ಶಿವಾಜಿ ಮಹಾರಾಜ–2025ರ ಜಯಂತ್ಯುತ್ಸವದ ಅಂಗವಾಗಿ ನಗರದ ರಾಜೋಟಿ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಸಾಮಾಜಿಕ ಕಾರ್ಯಕರ್ತ ವಿರೂಪಾಕ್ಷಪ್ಪ ಎಮ್.ಹೆಬ್ಬಳ್ಳಿ ಅವರನ್ನು ಶ್ರೀರಾಮ ಸೇನೆ ಸಂಘಟನೆಯ ಮುಖಂಡರು ಹಾಗೂ ಹಿಂದೂ ಬಾಂಧವರು ಸರ್ವಾನುಮತದಿಂದ ಆಯ್ಕೆ ಮಾಡಿದರು.

ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದ ನಿಕಟಪೂರ್ವ ಅಧ್ಯಕ್ಷ ಜಗದೀಶ್ ಎಸ್.ಪಿ., ಕಳೆದ

> ಪ್ರತಿ ವರ್ಷ ಸಂಘಟಕರು ವ್ಯಕ್ತಿಯ ಸಾಮಾಜಿಕ ಕಾರ್ಯಕ್ರಮ ಗುರುತಿಸಿ ಜಯಂತ್ಯುತ್ಸವದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತಾರೆ. ಯಾವುದೇ ಫಲಾಪೇಕ್ಷೆ ಇಲ್ಲದೇ ನನ್ನನ್ನು 2024ರಲ್ಲಿ 7ನೇ ವರ್ಷದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕೆ ಅಭಾರಿಯಾಗಿದ್ದೇನೆ. 7ನೇ ವರ್ಷದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ಸವಿನೆನಪಿಗಾಗಿ ಗೋಶಾಲೆ ಹಾಗೂ ಪಾಠಶಾಲೆ ನಿರ್ಮಿಸಲು ವಿಶೇಷ ಸೇವೆಯನ್ನು ದೇಣಿಗೆ ರೂಪದಲ್ಲಿ ಹಂತ–ಹಂತವಾಗಿ ನೀಡುತ್ತೇನೆ.
>
> – ಜಗದೀಶ್ ಎಸ್.ಪಿ.
> ನಿಕಟಪೂರ್ವ ಅಧ್ಯಕ್ಷರು,
> ಜಯಂತ್ಯುತ್ಸವ ಸಮಿತಿ–2024



ವರ್ಷ ಮಹಾರಾಜರ ಜಯಂತ್ಯುತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗಿದೆ. ಈ ಕಾರ್ಯಕ್ರಮ ಕೇವಲ ಒಂದು ಜಾತಿಗೆ ಸಿಮಿತವಾಗಿರದೆ, ಜಾತಿ ಮೀರಿ ಶಿವಾಜಿ ಜಯಂತಿ ಆಚರಿಸುತ್ತಾರೆ ಎನ್ನುವ ಅನುಭವವಾಗಿದೆ. ಇಲ್ಲಿ ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ ಎಂದರು.

ನಗರಸಭೆ ಸದಸ್ಯ ಅನಿಲ ಅಬ್ಬಿಗೇರಿ ಮಾತನಾಡಿ, 2025ರ ಶಿವಾಜಿ ಮಹಾರಾಜರ ಜಯಂತಿಯನ್ನು ವಿಶೇಷವಾಗಿ ಆಚರಣೆ ಮಾಡಲಾಗುವುದು. ನಗರದಲ್ಲಿ ನಡೆಯುವ ಶಿವಾಜಿ ಜಯಂತ್ಯುತ್ಸವ ರಾಜ್ಯದಲ್ಲಿಯೇ ಹೆಸರುವಾಸಿಯಾಗಿದೆ. ಹಿಂದೂಗಳು ತಮ್ಮ ಜಾತಿಯನ್ನು ಬದಿಗೊತ್ತಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಹಿಂದೂ ಸಮಾಜವನ್ನು ಸಂಘಟಿಸುವುದು ಬಹುದೊಡ್ಡ ಸವಾಲಾಗಿದೆ. ಜಯಂತ್ಯುತ್ಸವ ನಡೆಸುವುದರಿಂದ ಹಿಂದೂಗಳು ಒಂದಾಗಲೂ ಪ್ರೇರಣೆಯಾಗಲಿದೆ ಎಂದರು.

ಶ್ರೀರಾಮ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಖಾನಪ್ಪನವರ ಮಾತನಾಡಿ, ಶ್ರೀರಾಮ ಸೇನಾ ಸಂಘಟನೆಯ ಯುವಕರು, ಹಿಂದೂ ಯುವಕರು

> 2016ರಿಂದ ಶಿವಾಜಿ ಜಯಂತಿ ಆರಂಭ ಮಾಡಲಾಯಿತು. ಪ್ರಥಮ ವರ್ಷ ಹುಬ್ಬಳ್ಳಿಯಿಂದ ಶಿವಾಜಿ ಮೂರ್ತಿ ತರಲಾಯಿತು. ಅಂದು ರಾಜು ಡಂಬಳ ಅವರು ಒಂದು ರೂ ಪಡೆಯದೇ ಡಿಜೆ ಸೇವೆ ಮಾಡಿದರು. 2017ರಲ್ಲಿ ಯಥಾ ಸ್ಥಿತಿ ಮುಂದುವರೆಯಿತು. 2018ರಿಂದ 2024ರವರೆಗೆ ಉತ್ಸವವು ಅದ್ದೂರಿಯಾಗಿ ನಡೆದುಕೊಂಡು ಬಂದು ಆರ್ಥಿಕವಾಗಿ ಬಲಿಷ್ಠವಾಗಿ, ಸಂಘಟನೆಯಿಂದ ಜಾಗ ಖರೀದಿ ಮಾಡಲಾಗಿದೆ. ಇದು ನಮ್ಮ ಸಂಘಟನೆಯ ಶಕ್ತಿ.
>
> – ಸೋಮು ಗುಡಿ.
> ಜಿಲ್ಲಾಧ್ಯಕ್ಷರು, ಶ್ರೀರಾಮ ಸೇನಾ.

ಸಂಘಟನೆಯ ಬಗ್ಗೆ ಕಳಕಳಿ ಹೊಂದಬೇಕು. ಜಯಂತ್ಯುತ್ಸವ ಅದ್ದೂರಿಯಾಗಿ ನಡೆಯಲು ಯುವಕರ ಪಾತ್ರ ಮಹತ್ವದ್ದಾಗಿದೆ. ನಗರದಲ್ಲಿ ಸಾವಿರಾರು ಸಂಘಟನೆಗಳಿವೆ. ಅದರಲ್ಲಿ ಶ್ರೀರಾಮ ಸೇನಾ ಸಂಘಟನೆಗೆ ವಿಶೇಷವಾದ ಶಕ್ತಿ ಇದೆ. ಆಟೋ ಸೇನಾ ಪ್ರತಿಯೊಬ್ಬ ಕಾರ್ಯಕರ್ತರು ಗಣವೇಷದೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದರು.

ಹಿಂದೂಗಳನ್ನು ಒಗ್ಗೂಡಿಸಿ ಧರ್ಮ ರಕ್ಷಣೆ ಮಾಡುವ ಅವಶ್ಯಕತೆ ಇದೆ. ಹಿಂದೂತ್ವಕ್ಕಾಗಿ ಹೋರಾಡುವ ಪ್ರತಿಯೊಬ್ಬರೂ ತೆರೆದ ಪುಸ್ತಕದಂತೆ ಇರಬೇಕು. ವೇದಿಕೆ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಹೆಚ್ಚಿನ ಮಹತ್ವ ನೀಡಬೇಕು ಎಂದರು.

**ಖಾಸಗಿ ಕಂಪನಿಯಿಂದ ಶಾಲಾ ಮಕ್ಕಳಿಗೆ ಕಂಪ್ಯೂಟರ್ ಕೊಡುಗೆ**

# ಕಂಪ್ಯೂಟರ್ ಜ್ಞಾನ ಅತ್ಯಗತ್ಯ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಖಾಸಗಿ ಶಾಲೆಗಳಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ಮಕ್ಕಳನ್ನು ಸೆಳೆಯುವ ಕಾರ್ಯವನ್ನು ಇಂದು ಶಿಕ್ಷಣ ಸಂಸ್ಥೆಗಳು ಮಾಡುತ್ತಿವೆ. ಇದರ ನಡುವೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಕೂಡ ಸರ್ಕಾರಿ ಶಾಲೆಯಲ್ಲಿ ಇಂಗ್ಲೀಷ್‌ಗೆ ಆದ್ಯತೆಯ ಜೊತೆಗೆ ಕೆಲವೊಂದು ದೊಡ್ಡ ಮಟ್ಟದ ಖಾಸಗಿ ಕಂಪನಿಗಳು ಕೂಡ ಸರ್ಕಾರಿ ಶಾಲೆಯ ಮಕ್ಕಳಿಗೆ ಶಿಕ್ಷಣಕ್ಕೆ ಅಗತ್ಯವಾಗಿರುವ ಸಾಮಾಗ್ರಿಗಳನ್ನು ವಿತರಿಸಿ ಪ್ರೋತ್ಸಾಹ ನೀಡುತ್ತಿರುವುದನ್ನು ಮಕ್ಕಳು ಸದುಪಯೋಗಪಡಿಸಿಕೊಳ್ಳಲು ಮುಂದಾಗಬೇಕು ಎಂದು ಗ್ರಾ.ಪಂ ಅಧ್ಯಕ್ಷೆ ಲಲಿತಾ ರಾಠೋಡ ಹೇಳಿದರು.

ಸಮೀಪದ ಅಬ್ಬಿಗೇರಿ ಗ್ರಾಮದ ಸರ್ಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಭಾನುವಾರ ಬೆಂಗಳೂರಿನ ಕಾಲಿನ್ಸ್ ಏರೋಸ್ಪೇಸ್ ಆರ್.ಟಿ.ಎಕ್ಸ್ ಕಂಪನಿ ವತಿಯಿಂದ



ಉಚಿತವಾಗಿ ಸರ್ಕಾರಿ ಶಾಲೆಯ ಮಕ್ಕಳ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಕೊಡುಗೆಯಾಗಿ ನೀಡಿದ 8 ಕಂಪ್ಯೂಟರ್‌ಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮೀಣ ಶಾಲೆಯ ಮಕ್ಕಳು ಕೂಡ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅಧ್ಯಯನಶೀಲರಾಗಲು ಮುಂದಾಗಬೇಕು. ಪ್ರಸುತ್ತ ದಿನಮಾನಗಳಲ್ಲಿ ಕಂಪ್ಯೂಟರ್ ಜ್ಞಾನ ಅತೀ ಅವಶ್ಯಕವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರಾಥಮಿಕ ಹಂತದಲ್ಲಿಯೇ ಕಂಪ್ಯೂಟರ್ ಬಗ್ಗೆ ಜ್ಞಾನವನ್ನು ಪಡೆದುಕೊಂಡರೆ ಮುಂಬರುವ ಶಿಕ್ಷಣಕ್ಕೆ ಸಾಕಷ್ಟು ಅನುಕೂಲವಾಗುತ್ತದೆ ಎಂದರು.

ಈ ವೇಳೆ ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಈರಣ್ಣ ತಿಪ್ಪಶೆಟ್ಟಿ, ಶ್ರೀಶೈಲಪ್ಪ ಶಿವಶಿಂಪರ, ಗಂಗಾಧರ ತಳವಾರ ಇವರನ್ನು ಸನ್ಮಾನಿಸಲಾಯಿತು. ಎಸ್.ಡಿ.ಎಂ.ಸಿ ಅಧ್ಯಕ್ಷ ದೇವಪ್ಪ ಬಿಲ್ಲರ, ಉಪಾಧ್ಯಕ್ಷ ಬಸಮ್ಮ ತೆಗ್ಗಿನಕೇರಿ, ಸದಸ್ಯರಾದ ಬಸವರಾಜ ಇಂಬ್ರಾಪೂರ, ಬಸವರಾಜ ಬೇಲೇರಿ, ರಾಘು ಚಿಕ್ಕೆನಕೊಪ್ಪ, ಶಿವಕುಮಾರ ಶಿವಪೂಜಿ, ಶಾಲಾ ಮುಖ್ಯೋಪಾಧ್ಯಾಯ ಆರ್.ಬಿ. ಬೆಲ್ಲದ, ಸಿ.ಆರ್.ಪಿ ಮೂಲಿಮನಿ, ಪಿ.ಡಿ.ಓ ಲೋಹಿತ್ ಎಂ, ಗ್ರಾ.ಪಂ ಸದಸ್ಯರಾದ ಸುರೇಶ ನಾಯ್ಕರ, ಸಚಿನ ಪಾಟೀಲ, ಸಿದ್ದಪ್ಪ ಹರದಾರಿ, ಬಸವರಾಜ ಕಮ್ಮಾರ, ಶಂಕರ ಇಟಗಿ, ದೇವಪ್ಪ ಜಂತ್ಲಿ, ರೇಖಾ ಅವರಡ್ಡಿ, ರೇಖಾ ವೀರಾಪೂರ, ಹಳೆಯ ವಿದ್ಯಾರ್ಥಿಗಳಾದ ಉಡಚಪ್ಪ ವಗ್ಗಾರ, ಶರಣಪ್ಪ ಹುಳ್ಳಿ, ಶರಣಪ್ಪ ತಿಪ್ಪಶೆಟ್ಟಿ, ಬಸವರಾಜ ಹನಮನಾಳ, ಮಹಾದೇವಪ್ಪ ಕಂಬಳಿ ಮುಂತಾದವರಿದ್ದರು.



ಹುಬ್ಬಳ್ಳಿ ವಿದ್ಯುತ್ ನಿಗಮದ (ಹೆಸ್ಕಾಂ) ಅಧ್ಯಕ್ಷ ಅಜ್ಜಂಪೀರ ಖಾದ್ರಿ ಅವರು ಸೋಮವಾರ ಗದಗ ನಗರದ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಲಾಯಿತು. ಹುಲಕೋಟಿ ಗ್ರಾ.ಪಂ ಮಾಜಿ ಅಧ್ಯಕ್ಷ ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಹಾಸೀಮಸಾಬ ತಹಸೀಲ್ದಾರ, ಕಾಂಗ್ರೆಸ್ ಯುವ ನಾಯಕ ಕರೀಮಸಾಬ ಸುಣಗಾರ, ಕರ್ನಾಟಕ ರಾಜ್ಯ ವಕೀಲರ ಪರಿಷತ್ ವೆಲ್‌ಫೇರ್ ಕಮಿಟಿಯ ಸದಸ್ಯರು ಹಾಗೂ ನೋಟರಿ ವಕೀಲರಾಗಿರುವ ಎಸ್.ಕೆ. ನದಾಫ್ ಸೇರಿದಂತೆ ಹಲವರಿದ್ದರು.

# ಸಂಭ್ರಮದ ಶ್ರೀ ಬೀರಲಿಂಗೇಶ್ವರ ಜಾತ್ರೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸಮೀಪದ ತಿಮ್ಮಾಪೂರ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ ವಿಜ್ರಂಭಣೆಯಿಂದ ನೆರವೇರಿತು. ಬೆಳಿಗ್ಗೆ 10 ಗಂಟೆಗೆ ಸಕಲ ಮಂಗಳ ವಾದ್ಯಗಳೊಂದಿಗೆ ಪಲ್ಲಕ್ಕಿಯಲ್ಲಿ ದೇವರನ್ನು ಕೂರಿಸಿ, ಗಂಗಾ ಪೂಜೆ ಸಲ್ಲಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಗುಡಿಯನ್ನು ತಲುಪಿತು.ಮಧ್ಯಾಹ್ನ ನೂರಾರು ಭಕ್ತರು ಮಹಾಪ್ರಸಾದವನ್ನು ಸ್ವೀಕರಿಸಿದರು. ರಾತ್ರಿ ನಡೆದ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ, ರಸಮಂಜರಿ ಕಾರ್ಯಕ್ರಮವನ್ನು ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಬಾಬರಿ ಉದ್ಘಾಟಿಸಿದರು.

ಬೀರಲಿಂಗೇಶ್ವರ ಜಾತ್ರಾ ಕಮಿಟಿ ಸದಸ್ಯರಾದ ರಮೇಶ



ಬನಾಪೂರ, ಬಸವರಾಜ ದೇವರವರ, ಶಿವಾನಂದ ಡಂಬಳ, ಚಂದ್ರು ಆಲೂರ, ಹನುಮಪ್ಪ ಬೀಚಗಲ್ಲ, ಮಾರುತಿ ಕಟಗಿ, ಮಂಜುನಾಥ ಕೊಪ್ಪಳ, ಶ್ರೀಕಾಂತ ಬಾಬರಿ, ಮಾರುತಿ ಹಚ್ಚಪ್ಪನವರ, ಬೀರಪ್ಪ ಬಂಡಿಹಾಳ, ಮಲ್ಲಪ್ಪ ಡಂಬಳ, ಬೀರಪ್ಪ ಬನಾಪೂರ, ಹನುಮಪ್ಪ ಬಿಚಗಲ್ಲ, ಮಾರುತಿ ಗಾಜಿ, ಶರಣಪ್ಪ ಜೋಗಿನ, ಶ್ರೀನಿವಾಸ ಗಾಜಿ, ಹನುಮಪ್ಪ ಜೋಗಿನ, ಮಲ್ಲಪ್ಪ ಜೋಗಿನ, ಮಂಜು ವೀರಾಪುರ ಮುಂತಾದವರಿದ್ದರು. ಗೂಳಪ್ಪ ಹಚ್ಚಪ್ಪನವರ ಕಾರ್ಯಕ್ರಮ ನಿರೂಪಿಸಿದರು.

# ಸರ್ವ ಧರ್ಮಗಳಿಗೂ ಮಿಗಿಲಾದ ಸಂವಿಧಾನ ನಮ್ಮದು

■ ವಿಜಯಸಾಕ್ಷಿ ಸುದ್ದಿ, ಗದಗ

ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಹಾಗೂ ಏಕತೆಯ ತತ್ವದಲ್ಲಿ ಸರ್ವಧರ್ಮಗಳಿಗೂ ಮಿಗಿಲಾದ ಧರ್ಮವನ್ನು ನಮ್ಮ ಸಂವಿಧಾನ ನಮಗೆ ನೀಡಿದೆ ಎಂದು ಅನಿತಾ ಜಕಬಾಳ ಅವರು ಹೇಳಿದರು.

ನಗರದ ಶ್ರೀ ಕರಿಯಮ್ಮ ದೇವಿ ಮಹಿಳಾ ಮಂಡಳ ಹಾಗೂ ಶ್ರೀ ಕನಕಾಮೃತ ವಾಹಿನಿಯ ಸಂಯುಕ್ತಾಶ್ರಯದಲ್ಲಿ ನೆರವೇರಿದ 76ನೇ ಗಣರಾಜ್ಯೋತ್ಸವದಲ್ಲಿ ಗಣರಾಜ್ಯೋತ್ಸವದ ಇತಿಹಾಸವನ್ನು ತಿಳಿಸಿ ಮಾತನಾಡಿದ ಅವರು, ಸಂವಿಧಾನ ನಮಗೆ ಮೂಲಭೂತ ಹಕ್ಕುಗಳನ್ನು ನೀಡುವುದರ ಜೊತೆಗೆ ಕೆಲವು ಕರ್ತವ್ಯಗಳನ್ನು ತಿಳಿಸಿದೆ. ಅದರಂತೆ ನಾವು ಯಾವತ್ತು ಸಂವಿಧಾನವನ್ನು ಗೌರವಿಸಬೇಕು



ಹಾಗೂ ಸಂವಿಧಾನಕ್ಕೆ ಚ್ಯುತಿ ಬಾರದಂತೆ ಕಾಪಾಡಬೇಕು ಎಂದು ತಿಳಿಸಿದರು.

ಕನಕಾಮೃತ ವಾಹಿನಿಯ ಅಧ್ಯಕ್ಷರಾದ ಎಂ.ಎನ್. ಕಾಮನಹಳ್ಳಿ ಮಾತನಾಡಿ, ಈ ವರ್ಷ 'ಸುವರ್ಣ ಭಾರತ, ಪರಂಪರೆ ಹಾಗೂ ಅಭಿವೃದ್ಧಿ' ಎಂಬ ಧ್ಯೇಯೋದ್ದೇಶದೊಂದಿಗೆ ದೇಶಾದ್ಯಂತ ಗಣತಂತ್ರವನ್ನು ಆಚರಿಸಲಾಗುತ್ತಿದೆ ಎಂದು ವಿವರಿಸಿದರು.

ಶ್ರೀ ಕರಿಯಮ್ಮ ದೇವಿ ಮಹಿಳಾ ಮಂಡಳದ ಅಧ್ಯಕ್ಷರಾದ ರೇಣುಕಾ ಕೇಸರಿ ಧ್ವಜಾರೋಹಣವನ್ನು ನೆರವೇರಿಸಿದರು. ಡಾ. ಎನ್.ಎಂ. ಅಂಬಲಿಯವರ ನಿರೂಪಿಸಿದರು. ತನುಜಾ ಗೋವಿಂದಪ್ಪನವರ ವಂದಿಸಿದರು. ಕಾರ್ಯಕ್ರಮದಲ್ಲಿ ಎಚ್.ಎಸ್. ಕುರಿ, ಆರ್.ಬಿ. ಅಂದಪ್ಪನವರ, ರತ್ನಾ ಮನ್ನಾಪೂರ, ಲಕ್ಷ್ಮವ್ವ ಕುರಿ, ಗೊರವರ, ಎಸ್.ವೈ. ಕೊಪ್ಪದ, ಎಚ್.ಎಸ್. ಕಿಂದ್ರಿ ಮುಂತಾದವರು ಉಪಸ್ಥಿತರಿದ್ದರು.

# ಶಿಕ್ಷಣ ಕ್ಷೇತ್ರಕ್ಕೆ ಶಿವಾನಂದರ ಸೇವೆ ಅಗಾಧ



■ ವಿಜಯಸಾಕ್ಷಿ ಸುದ್ದಿ, ಗದಗ

ಅಥಣಿ ಮೋಟಗಿಮಠದ ಶ್ರೀಗಳು ಕೊಡಮಾಡುವ ಪ್ರತಿಷ್ಠಿತ 'ಸಮಾಜ ಸೇವಾ ಭೂಷಣ ಪ್ರಶಸ್ತಿ' ಪುರಸ್ಕೃರಾದ, ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೈದ ಶಿವಾನಂದ ಪಟ್ಟಣಶೆಟ್ಟರ ಅವರನ್ನು ಗದಗ ಜಿಲ್ಲೆಯ ಪ್ರಮುಖ ಸಂಘಟನೆಗಳ ಅಧ್ಯಕ್ಷರು ಮತ್ತು ಸದಸ್ಯರು ಸಂಮಾನಿಸಿ ಅಭಿನಂದನೆಗಳನ್ನು ಸಲ್ಲಿಸಿ ಶುಭಹಾರೈಸಿದರು. ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಕಚೇರಿಯಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎ. ಬಳಿಗೇರ, ಶಿರಹಟ್ಟಿ ತಾಲೂಕಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ಜಿಲ್ಲಾ ಮಾಧ್ಯಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷರಾದ ಎಂ.ಕೆ. ಲಮಾಣಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷ ಬೂದಪ್ಪ ಅಂಗಡಿ, ಗದಗ ಜಿಲ್ಲಾ ಮಾಧ್ಯಮಿಕ ಶಾಲಾ ನೌಕರರ ಸಂಘ ಶಹರ ಘಟಕದ ಅಧ್ಯಕ್ಷ ಬಿ.ಕೆ. ನಿಂಬನಗೌಡರ ಸೇರಿದಂತೆ ಪ್ರಮುಖರು ಪ್ರೊ. ಶಿವಾನಂದ ಪಟ್ಟಣಶೆಟ್ಟರ ಅವರನ್ನು ಸಂಮಾನಿಸಿದರು. ತರುವಾಯ ಮುಖಂಡರು ಮಾತನಾಡಿ, ಲಿಂ. ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ಶ್ರೀಮಠದ ಆಡಳಿತಾಧಿಕಾರಿಗಳಾಗಿ ಪಟ್ಟಣಶೆಟ್ಟಿಯವರು ಅತ್ಯಂತ ಶ್ರಮ, ಶ್ರದ್ಧೆಯಿಂದ ಕಾರ್ಯನಿರ್ವಹಿಸಿ ಸಂಸ್ಥೆಯನ್ನು ಹೆಮ್ಮರವಾಗಿ ಕಟ್ಟಿ ಬೆಳೆಸಿದ್ದಾರೆ. ಕಾಯಕವೇ ಕೈಲಾಸವೆಂಬ ಶರಣವಾಣಿಯಂತೆ ಸದಾ ಕಾಯಕದಲ್ಲಿದ್ದುಕೊಂಡು ತನು–ಮನ–ಧನದಿಂದ, ಕಾಯಾ–ವಾಚಾ–ಮನಸಾ ಸೇವೆಗೈಯುತ್ತಾ ಬಂದವರು. ಶಿಕ್ಷಣ ಕ್ಷೇತ್ರಕ್ಕೆ ಶಿವಾನಂದ ಪಟ್ಟಣಶೆಟ್ಟರ ಸೇವೆ ಅಗಾಧವಾದುದು ಎಂದು ಮೆಚ್ಚುಗೆಯ ನುಡಿಗಳನ್ನಾಡಿದರು.

**ಸಂವಿಧಾನ ಸನ್ಮಾನ, ಭೀಮ ಸಂಗಮ ಕಾರ್ಯಕ್ರಮದಲ್ಲಿ ಮಹೇಂದ್ರ ಕೌತಾಳ**


# ಸಂವಿಧಾನ ರಕ್ಷಣೆಯೇ ಬಿಜೆಪಿಯ ಧ್ಯೇಯ

■ ವಿಜಯಸಾಕ್ಷಿ ಸುದ್ದಿ, ಗದಗ

ಸ್ವಾರ್ಥಕ್ಕಾಗಿ ತಮ್ಮ ಕುರ್ಚಿ ಉಳಿಸಿಕೊಳ್ಳಲು ಕಾಂಗ್ರೆಸ್ ಸರ್ಕಾರ ಸಂವಿಧಾನದಲ್ಲಿ ಹಲವಾರು ತಿದ್ದುಪಡಿಗಳನ್ನು ಮಾಡಿದೆಯೇ ಹೊರತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಏನೂ ಮಾಡಲಿಲ್ಲ ಎಂದು ರಾಜ್ಯ ಎಸ್.ಸಿ. ಮೋರ್ಚಾದ ಪ್ರಧಾನ ಕಾರ್ಯದರ್ಶಿ ಹಾಗೂ ಸಂವಿಧಾನ ಸನ್ಮಾನ ಅಭಿಯಾನದ ರಾಜ್ಯ ಸಂಯೋಜಕರಾದ ಮಹೇಂದ್ರ ಕೌತಾಳ ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಎಸ್.ವಿ. ಸಂಕನೂರ ಅವರ ನಿವಾಸದಲ್ಲಿ ಏರ್ಪಡಿಸಿದ್ದ ಸಂವಿಧಾನ ಸನ್ಮಾನ ಹಾಗೂ ಭೀಮ ಸಂಗಮ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ನಿವೃತ್ತ ಪ್ರಾಚಾರ್ಯರಾದ ಕೆ.ಎಚ್. ಬೆಲೂರ ಮಾತನಾಡಿ, ಡಾ. ಬಾಬಾ ಸಾಹೇಬ ಅಂಬೇಡ್ಕರವರು ನಡೆದು ಬಂದ ದಾರಿ ಹಾಗೂ ದೇಶಕ್ಕೆ ಕೊಟ್ಟ ಕೊಡುಗೆಯ ಕುರಿತು ವಿವರಿಸಿದರು. ಮೋಹನ ಅಲ್ಮೇಲ್ಕರ, ಉಷಾ ದಾಸರ, ರಾಜು




ಕುರಡಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ 26 ಪುರಷ ಹಾಗೂ 30 ಮಹಿಳಾ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಎಮ್.ಎಸ್. ಕರಿಗೌಡರ, ಮೋಹನ ಮಾಳಶೆಟ್ಟಿ, ವಿಜಯಕುಮಾರ ಗಡ್ಡಿ, ನಾಗರಾಜ ತಳವಾರ, ಭೀಮಸಿಂಗ್ ರಾಥೋಡ, ನಾಗರತ್ನ ಮುಳಗುಂದ, ಲಕ್ಷ್ಮಣ ದೊಡ್ಡಮನಿ, ಮಂಜುನಾಥ ತಳವಾರ, ಭೀಮವ್ವ ಬೇವಿನಕಟ್ಟಿ, ಜಗನ್ನಾಥಸಾ ಭಾಂಡಗೆ, ತೋಟಸಾ ಭಾಂಡಗೆ, ಡಿ.ಎಚ್. ಲದ್ವಾ, ಸಿದ್ದು ಪಲ್ಲೇದ, ಮಹೇಶ ದಾಸರ, ಅನಿಲ ಅಬ್ಬಿಗೇರಿ, ರಾಘವೇಂದ್ರ ಯಳವತ್ತಿ, ಮುತ್ತು ಮುಶಿಗೇರಿ, ಪ್ರಶಾಂತ ನಾಯ್ಕರ, ವಾಯ್.ಪಿ. ಅಡ್ನೂರ, ಪ್ರಕಾಶ ಅಂಗಡಿ, ಅಶೋಕ ಕರೂರ, ಹನಮಂತಪ್ಪ ದಿಂಡೇನರ, ಬೂದಪ್ಪ ಹಳ್ಳಿ, ಲಿಂಗರಾಜ ಪಾಟೀಲ, ಸಂತೋಷ ಅಕ್ಕಿ, ಶಶಿಧರ ದಿಂಡೂರ, ಟಿ.ಡಿ. ಲಮಾಣಿ, ಮಾಯಪ್ಪ ಭಜಂತ್ರಿ ಉಪಸ್ಥಿತರಿದ್ದರು.

ನಾಗರಾಜ ಕುಲಕರ್ಣಿ ಪ್ರಾರ್ಥನೆ ಮಾಡಿದರು. ಎಸ್.ಸಿ. ಮೋರ್ಚಾ ಜಿಲ್ಲಾ ಅಧ್ಯಕ್ಷ ಮಂಜುನಾಥ ಮುಳಗುಂದ ಕಾರ್ಯಕ್ರಮ ನಿರೂಪಿಸಿದರು. ಈಶ್ವರಪ್ಪ ರಂಗಪ್ಪನವರ ವಂದಿಸಿದರು. ರಮೇಶ ಸಜ್ಜಗಾರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

> ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿ, ಸಮಾನತೆ ಹಾಗೂ ಸಾಮಾಜಿಕ ನ್ಯಾಯ ಸಾರುವ ಸಂವಿಧಾನ ರಚನೆ ಮಾಡಿದ ಡಾ. ಬಿ.ಆರ್. ಅಂಬೇಡ್ಕರ ಅವರಿಗೆ ಗೌರವ ಸಲ್ಲಿಸುವ ಹಿನ್ನೆಲೆಯಲ್ಲಿ ಭೀಮ ಸಂಗಮ ಹಾಗೂ ಸಹ ಭೋಜನ ಔತಣಕೂಟ ಏರ್ಪಡಿಸಲಾಗಿದೆ. ಕಾಂಗ್ರೆಸ್‌ನವರು ಬಿಜೆಪಿ ಸರ್ಕಾರ ಸಂವಿಧಾನವನ್ನು ಬದಲಾವಣೆ ಮಾಡುತ್ತಾರೆ ಎಂದು ಸುಳ್ಳು ಹೇಳುತ್ತಿರುವುದು ಸತ್ಯಕ್ಕೆ ದೂರವಾದದ್ದು ಎಂದರು.



ನಗರದ ಹಿದಾಯತ್ ಜೆ ಯು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಂಸ್ಥೆಯ ಅಧ್ಯಕ್ಷ ಜುನೇದ ಉಮಚಗಿ 76ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿದರು. ಪ್ರೊ. ಸೈಯದ್ ಸಿರಾಜ್ ಎನ್.ಖಾಜಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಕೆ.ಆಯ್. ಶೇಖ, ನಿರ್ದೇಶಕರಾದ ಅಬ್ದುಲ್ ಹಫಿಜ್ ಉಮಚಗಿ, ಮುಸ್ತಫಾ ಶಿರಹಟ್ಟಿ, ಶಾಲೆಯ ಪ್ರಧಾನ ಗುರುಮಾತೆ, ಶಿಕ್ಷಕಿಯರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




ಗದಗ-ಬೆಟಗೇರಿ ವ್ಯಾಪ್ತಿಯ ಶ್ರೀ ಶರಣ ಬಸವೇಶ್ವರ ನಗರದ ಅಂಗನವಾಡಿ ಕೇಂದ್ರ ಸಂ.235ರಲ್ಲಿ ವ್ಯಾಸಂಗ ಮಾಡುತ್ತಿರುವ ಬಾಲ ಪ್ರತಿಭೆ ರುಸ್ತುಂಖಾನ್ ಯುನಸ್‌ಖಾನ್ ಪಠಾಣ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಹುಬ್ಬಳ್ಳಿ ಕಲಾ ಹಬ್ಬದಲ್ಲಿ ಭಾಗವಹಿಸಿ ತನ್ನ ಪ್ರತಿಭೆ ಮೆರೆದು ಪ್ರಥಮ ಸ್ಥಾನ ಗಳಿಸಿ ಗದಗ ಜಿಲ್ಲೆಯ ಕೀರ್ತಿ ಹೆಚ್ಚಿಸಿದ ನಿಮಿತ್ತ ಕಾನೂನು, ಪ್ರವಾಸೋದ್ಯಮ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ. ಪಾಟೀಲ ಪ್ರಮಾಣಪತ್ರವನ್ನು ನೀಡಿ ಅಭಿನಂದಿಸಿದರು.

### ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿಗಳವರ 133ನೇ ಜಯಂತ್ಯುತ್ಸವ

# ಫೆ.2ರಂದು 'ಅಮರಸ್ವರ ಸಮಾರೋಹ'

**■ ವಿಜಯಸಾಕ್ಷಿ ಸುದ್ದಿ, ಧಾರವಾಡ**

ಉತ್ತರದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ದಕ್ಷಿಣಕ್ಕೆ ತಂದ, ಅರಮನೆಯ ಸಂಗೀತಕ್ಕೆ ಗುರು ಮನೆಯ ಗೌರವವನ್ನು ದೊರಕಿಸಿಕೊಟ್ಟ, ವಚನ ಸಾಹಿತ್ಯವನ್ನು ಮೊಟ್ಟಮೊದಲಿಗೆ ಸಂಗೀತಕ್ಕೆ ಅಳವಡಿಸಿ ಹಾಡಿದ, ಗದುಗನ್ನು ಸಂಗೀತದ ಗದ್ದಿಗೆಯನ್ನಾಗಿ ಮಾಡಿದ, ಪಂಡಿತ ಪಂಚಾಕ್ಷರಿ ಗವಾಯಿಗಳವರ ಜಯಂತ್ಯುತ್ಸವವು, ಗದುಗಿನ ಕಲಾ ವಿಕಾಸ ಪರಿಷತ್ ವತಿಯಿಂದ ಧಾರವಾಡದ ಡಾ. ದ.ರಾ. ಬೇಂದ್ರೆ ಭವನದಲ್ಲಿ ಫೆಬ್ರವರಿ 2ರಂದು ಹಮ್ಮಿಕೊಂಡಿದೆ.

ಬೆಳಿಗ್ಗೆ 10-30ರಿಂದ ರಾತ್ರಿ 8 ಗಂಟೆಯವರೆಗೆ ನಡೆಯುವ ಒಂದು ದಿನದ ಈ ಸಮಾರೋಹದ ಉದ್ಘಾಟನೆಯನ್ನು, ಖ್ಯಾತ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಗಾಯಕರಾದ ಡಾ. ಶಾಂತಾರಾಮ ಹೆಗಡೆ ನೆರವೇರಿಸಲಿದ್ದಾರೆ. ಧಾರವಾಡದ ಹಿರಿಯ ರಂಗಕರ್ಮಿ ಡಾ. ಶಶಿಧರ ನರೇಂದ್ರ ಸಮಾರಂಭದ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಧಾರವಾಡದ ಶ್ರೀ ಸಾಯಿ ಪ.ಪೂ ವಿಜ್ಞಾನ ಮತ್ತು ವಾಣಿಜ್ಯ ವಿದ್ಯಾಲಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕರಾದ ಡಾ. ವೀಣಾ ಬಿರಾದಾರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಲಾ ವಿಕಾಸ್ ಪರಿಷತ್ ಸಂಸ್ಥಾಪಕ ಸಿ.ಕೆ.ಹೆಚ್. ಶಾಸ್ತ್ರೀ (ಕಡಣಿ) ಪ್ರಾಸ್ತಾವಿಕವಾಗಿ ಮಾತನಾಡುವರು.





ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ಮಹಿಳಾ ಘಟಕದ ರಾಜ್ಯ ಸಂಘಟನಾ ಕಾರ್ಯದರ್ಶಿ, ಸಂಗೀತ ಶಿಕ್ಷಕಿ ದೇವಿಕಾ ಕೆ.ಜೋಗಿ ಸ್ವಾಗತ ಮಾಡುವರು. ಸ್ವರ ಸಂವಾದಿನಿ ಸಂಗೀತ ಪಾಠಶಾಲೆಯ ಮಕ್ಕಳು ಪ್ರಾರ್ಥನಾ ಸಂಗೀತ ನಡೆಸಿಕೊಡುವರು. ಐಶ್ವರ್ಯ-ಅಮೂಲ್ಯ ಹಡಪದ ಸಹೋದರಿಯರು ಸ್ವಾಗತ ನೃತ್ಯ ಸೇವೆ ಸಲ್ಲಿಸುವರು. ಅಳ್ನಾವರದ ಸರಕಾರಿ ಪ್ರಥಮದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರೊ. ಪಿ.ಆರ್. ನಾಗರಾಳ ನಿರೂಪಣೆ ಮಾಡುವರು.

ಇದೇ ಸಂದರ್ಭದಲ್ಲಿ, ಕಲಾ ವಿಕಾಸ ಪರಿಷತ್‌ನ 2023-24ನೇ ಸಾಲಿನ ವಾರ್ಷಿಕ ಪ್ರಶಸ್ತಿ 'ಗಾನಯೋಗಿ ಪಂಚಾಕ್ಷರಿ ಅನುಗ್ರಹ' ಪ್ರಶಸ್ತಿಯನ್ನು ಅಂತಾರಾಷ್ಟ್ರೀಯ ಖ್ಯಾತ ತಬಲಾ ವಾದಕ, ಧಾರವಾಡ ಆಕಾಶವಾಣಿ ನಿಲಯದ ಕಲಾವಿದ ಕಲಬುರ್ಗಿಯ ಪಂ. ಶಾಂತಲಿಂಗಪ್ಪ ಹೂಗಾರ (ದೇಸಾಯಿ ಕಲ್ಲೂರ) ಇವರಿಗೆ, ಹಾಗೂ ಧಾರವಾಡದ ಪ್ರತಿಷ್ಠಿತ ಕಲಾ ಪೋಷಕ ಸಂಸ್ಥೆಯಾದ ಶ್ರೀ ಕುಮಾರೇಶ್ವರ ಕಲ್ಚರಲ್ ಸೊಸೈಟಿ ಮತ್ತು ಶಿರಸಿಯ ಮಹಿಳಾ ಮತ್ತು ಮಕ್ಕಳ ಯಕ್ಷಗಾನ ಮಂಡಳಿ 'ಯಕ್ಷ ಕಲಾಸಂಗಮ' ಕಲಾ ಪೋಷಕ ಮತ್ತು ಕಲಾ ಶಿಕ್ಷಣ ಸಂಸ್ಥೆಗಳಿಗೆ ಪ್ರದಾನಿಸಲಾಗುವುದು.

ಉದ್ಘಾಟನಾ ಸಮಾರಂಭದ ನಂತರ ಮಹಾ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಧಾರವಾಡದ ನಿವೃತ್ತ ಶಿಕ್ಷಕಿ ಮಹಾದೇವಿ ಕೊಪ್ಪದ ಪ್ರಸಾದ ದಾಸೋಹ ಭಕ್ತಿಸೇವೆ ವಹಿಸಿಕೊಂಡಿದ್ದಾರೆ.

ಸಂಜೆ 4 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಕಲಾ ವಿಕಾಸ ಪರಿಷತ್ ಸಂಸ್ಥಾಪಕ ಸಿ.ಕೆ.ಹೆಚ್. ಶಾಸ್ತ್ರೀ (ಕಡಣಿ) ವಹಿಸಿಕೊಳ್ಳುವರು. ಖ್ಯಾತ ಸಾಹಿತಿಗಳು, ಆಕಾಶವಾಣಿ ಧಾರವಾಡ ಕೇಂದ್ರದ ನಿವೃತ್ತ ನಿರ್ದೇಶಕ ಬಸು ಬೇವಿನಗಿಡದ, ಹಿರಿಯ ರಂಗ ನಿರ್ದೇಶಕಿ, ಗಾಯಕಿ ವಿಶ್ವೇಶ್ವರಿ ಬಸವಲಿಂಗಯ್ಯ ಹಿರೇಮಠ, ಸಾಹಿತಿ-ಕಲಾವಿದ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಲಲಿತಕಲಾ ಹಾಗೂ ಸಂಗೀತ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಎ.ಎಲ್. ದೇಸಾಯಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಶಿಕ್ಷಕ, ಸಾಹಿತಿ ಬಸವರಾಜ ಹಡಪದ ಸ್ವಾಗತ ಭಾಷಣ ಮಾಡಲಿದ್ದಾರೆ. ಕವಿಯತ್ರಿ ಸುಮಂಗಲಾ ಚಕ್ರಸಾಲಿ ಹಳಿಯಾಳ ನಿರೂಪಣೆ ಮಾಡುವರು. ಆಮಂತ್ರಿತ ಆಹ್ವಾನಿತ ಮತ್ತು ಪ್ರಶಸ್ತಿ ಪುರಸ್ಕೃತ ಕಲಾವಿದರಿಂದ ದಿನಪೂರ್ತಿ ಸಂಗೀತ-ನೃತ್ಯ-ಕಲಾ ಪ್ರದರ್ಶನ ಆಯೋಜಿಸಲಾಗಿದೆ. ಆಸಕ್ತ ಸಂಗೀತ ಮತ್ತು ನೃತ್ಯ ಶಾಲೆಯ ಮಕ್ಕಳು ಭಾಗವಹಿಸಬಹುದಾಗಿದೆ ಮತ್ತು ತನು-ಮನ-ಧನದ ಭಕ್ತಿ ಸೇವೆ ಸಲ್ಲಿಸಿ ಗುರು ಕೃಪೆಗೆ ಪಾತ್ರರಾಗಬೇಕೆಂದು ಕಲಾ ವಿಕಾಸ ಪರಿಷತ್ ಸಂಸ್ಥಾಪಕ ಸಿ.ಕೆ.ಹೆಚ್. ಶಾಸ್ತ್ರೀ (ಕಡಣಿ) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕರಾದ, ಬೆಂಗಳೂರಿನ ಡಾ. ಗೋಪಾಲ ಕೆ. ರಾಯಚೂರ, ಧಾರವಾಡದ ಡಾ. ಪರಶುರಾಮ ಕಟ್ಟಿಸಂಗಾವಿ, ಆಕಾಶವಾಣಿ ಮತ್ತು ದೂರದರ್ಶನ ಸುಗಮ ಸಂಗೀತ ಕಲಾವಿದೆ ಸುಮಾ ಹಡಪದ, ಯುವ ಕಲಾವಿದ, ಸಂಗೀತ ಶಿಕ್ಷಕ ಗದಗ ಜಿಲ್ಲೆಯ ಡಂಬಳದ ಬಸವರಾಜ ಎನ್.ಸಿದ್ದಣ್ಣನವರ ಮತ್ತು ಸಂಗೀತ ನೃತ್ಯ ಕಲಾ ಶಿಕ್ಷಣ ಸಂಸ್ಥೆಗಳಾದ ಜ್ಞಾನ ಜ್ಯೋತಿ ಕಲಾ ಬಳಗ-ಹುಬ್ಬಳ್ಳಿ, ಶ್ರೀ ರಾಜರಾಜೇಶ್ವರಿ ಸಂಗೀತ ಕಲಾ ಪಾಠ ಶಾಲೆ-ಇಟ್ಟಿಗಿ, ಸುಸ್ವರ ಸಂಗೀತ ವಿದ್ಯಾ ಸಂಸ್ಥೆ-ದಾಂಡೇಲಿ, ಶ್ರೀ ದುರ್ಗಾದೇವಿ ನಾಟ್ಯ ಶಾಲೆ-ಹಳಿಯಾಳ ಇವರುಗಳಿಗೆ ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವದ ಸವಿ ನೆನಪಿಗಾಗಿ 'ಸುವರ್ಣ ಸಿರಿ ಸಮ್ಮಾನ' ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

## ಮೂಲ ದಾಖಲಾತಿಗಳ ಪರಿಶೀಲನೆಗೆ ಜ. 31 ಕೊನೆಯ ದಿನ

**■ ವಿಜಯಸಾಕ್ಷಿ ಸುದ್ದಿ, ಗದಗ**

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ರಾಜ್ಯ ಮಟ್ಟದ ಮಾನವ ಸಂಪನ್ಮೂಲ RoP-2024-25 ಅನುಮೋದನೆಯಂತೆ ಮಕ್ಕಳ ಆರೋಗ್ಯ ಕಾರ್ಯಕ್ರಮದ ಎನ್.ಬಿ.ಎಸ್.ಯು ವಿಭಾಗದಲ್ಲಿ ಒಟ್ಟು 12 ಶುಶ್ರೂಷಕ ಅಧಿಕಾರಿಗಳ ಹುದ್ದೆಗಳು ಅನುಮೋದನೆಯಾಗಿದ್ದು, ಸದರಿ ಹುದ್ದೆಗಳನ್ನು ರೋಷ್ಟರ್ ಕಂ ಮೆರಿಟ್ ಆಧರಿಸಿ ನಿಬಂಧನೆಗೊಳಪಟ್ಟು ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸದರಿ ಶುಶ್ರೂಷಕ ಹುದ್ದೆಗಳಿಗೆ ಅಪಲೋಡ್ ಆಗಿರುವ ಅರ್ಜಿಗಳಲ್ಲಿ ರೋಷ್ಟರ್ ಕಂ ಮೆರಿಟ್ ಅಳವಡಿಸಿದ 1:6 ಅನುಪಾತದಲ್ಲಿನ ಅಭ್ಯರ್ಥಿಗಳನ್ನು ಜನವರಿ 31 ರ ಸಂಜೆ 4 ರವರೆಗೆ ಖುದ್ದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ, ಕಚೇರಿ ಗದಗ ಇಲ್ಲಿಗೆ ತಮ್ಮ ಮೂಲ ದಾಖಲಾತಿಗಳ ಪರಿಶೀಲನೆಗೆ ಆಹ್ವಾನಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ, ಕಚೇರಿಯ ಸೂಚನಾ ಫಲಕದಲ್ಲಿ ಲಗತ್ತಿಸಲಾಗಿದೆ.

## ಸಂಗೊಳ್ಳಿ ರಾಯಣ್ಣನ ಆದರ್ಶಗಳನ್ನು ಪಾಲಿಸೋಣ



**■ ವಿಜಯಸಾಕ್ಷಿ ಸುದ್ದಿ, ಗದಗ**

ಬ್ರಿಟಿಷರ ವಿರುದ್ಧ ಸಮರ ಸಾರಿದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಪುಣ್ಯಸ್ಮರಣೆ ನಿಮಿತ್ತ ಕ್ರಾಂತಿ ಸೇನಾ ಗದಗ ಜಿಲ್ಲಾ ಸಂಘಟನೆ ವತಿಯಿಂದ ಬೃಹತ್ ಪಂಜಿನ ಮೆರವಣಿಗೆ ಗದಗ ನಗರದ ಶ್ರೀ ಕಿತ್ತೂರಾಣಿ ಚೆನ್ನಮ್ಮ ಸರ್ಕಲ್‌ನಿಂದ ಪ್ರಾರಂಭವಾಗಿ ಗದಗ-ಬೆಟಗೇರಿ ನಗರಸಭೆ ಮುಂಭಾಗದ ರಾಯಣ್ಣನವರ ಪುತ್ಥಳಿಯವರೆಗೆ ನೆರವೇರಿತು.

ಈ ಸಂದರ್ಭದಲ್ಲಿ ಕ್ರಾಂತಿ ಸೇನಾ ಗದಗ ಜಿಲ್ಲಾ ಗೌರವ ಕಾರ್ಯದರ್ಶಿ ಪ್ರವೀಣ ಹಬೀಬ ಮಾತನಾಡಿ, ರಾಯಣ್ಣನಿಗೆ ರಾಯ, ನಾಯಕ, ವೀರ ಸಂಗೊಳ್ಳಿ ರಾಯಣ್ಣ, ಕ್ರಾಂತಿವೀರ ರಾಯಣ್ಣ ಇತ್ಯಾದಿ ಹೆಸರಿಸಲ್ಪಟ್ಟಿವೆ. ಇಂತಹ ಕ್ರಾಂತಿಕಾರಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರನ್ನು ಮನದಲ್ಲಿ ಸ್ಮರಿಸುವ, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಕ್ರಾಂತಿ ಸೇನಾ ಗದಗ ತಾಲೂಕಾಧ್ಯಕ್ಷ ಭರತ್ ಮಾರೆಪ್ಪನವರ್, ಜಿಲ್ಲಾ ಕಾರ್ಯದರ್ಶಿ ಶಿವಕುಮಾರ್ ಕುಂಬಾರ್, ಕಾರ್ಯದರ್ಶಿ ಪವನ್ ಪುರದ್, ಗದಗ ಜಿಲ್ಲಾ ಮಹರ್ಷಿ ವಾಲ್ಮೀಕಿ ಗಜಪಡೆ ಟ್ರಸ್ಟ್ ಅಧ್ಯಕ್ಷ ಕಿರಣ್ ನಾಯ್ಕರ್, ಪ್ರದೀಪ್ ಸರ್ವದೆ, ಕಿರಣ್ ಪಟ್ಟಣಶೆಟ್ಟಿ, ನಾರಾಯಣ ಭಾಂಡಗೆ, ರಾಮು ಗಡಾದ್, ಬಸವರಾಜ ಅಸುಂಡಿ, ಈಶ್ವರ್ ಹಾಗೂ ಬಿಜೆಪಿ ಮುಖಂಡ ಗುರು ಬಾಂಡಗೆ ಮುಂತಾದವರಿದ್ದರು.


### ಆಗಸದಲ್ಲಿ ಗ್ರಹಗಳ ಪಥಸಂಚಲನ ವಿಕ್ಷಣೆಗೆ ಇಂದು ಅವಕಾಶ

# ವಿಶೇಷ ಖಗೋಳ ವಿದ್ಯಮಾನ ಕಣ್ತುಂಬಿಕೊಳ್ಳಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ಇತ್ತೀಚಿನ ಖಗೋಳ ವಿದ್ಯಮಾನಗಳಲ್ಲೊಂದಾದ ಗ್ರಹಗಳ ಪಥಸಂಚಲನ ಜ,21ರಿಂದ ಪ್ರಾರಂಭವಾಗಿ ಫೆಬ್ರವರಿ 21ರವರೆಗೂ ನಡೆದರೂ, ಜನವರಿ 21ರಿಂದ 29ರವರೆಗೆ ಅವುಗಳ ವಿಕ್ಷಣೆಗೆ ಅತೀ ಪ್ರಶಸ್ತವಾದ ಸಮಯವಾಗಿದೆ. ಈ ಖಗೋಳ ಗ್ರಹಗಳ ಮೆರವಣಿಗೆಯನ್ನು ನಮ್ಮ ಜೀವಮಾನದಲ್ಲಿ ನೋಡಲು ಸಿಗುತ್ತಿರುವುದು ನಮ್ಮ ಭಾಗ್ಯವಾಗಿದ್ದು, ಈ ಸಾರೆಯ ಈ ವಿದ್ಯಮಾನವನ್ನು ಯಾವ ವಿಶೇಷ ದೃಕ್ ಉಪಕರಣಗಳಿಲ್ಲದೇ ಬರಿಗಣ್ಣಿನಿಂದ ಶುಕ್ರ, ಶನಿ, ಗುರು ಹಾಗೂ ಮಂಗಳ ಗ್ರಹಗಳನ್ನು ನೋಡಲು ಸಾಧ್ಯ. ಆದರೆ ಇನ್ನಿತರ ಗ್ರಹಗಳಾದ ಯುರೆನಸ್, ನಪ್ಚೂನ್ ಮತ್ತು ಬುಧ ಗ್ರಹಗಳನ್ನು ನೋಡಲು ವಿಶೇಷ ಉಪಕರಣಗಳ ಅವಶ್ಯಕತೆ ಇದೆ.

ಈ ರೀತಿ ಗ್ರಹಗಳ ಪಥಸಂಚಲನ ಅಪರೂಪವಲ್ಲದಿದ್ದರೂ ಅತ್ಯಂತ ಸಮೀಪದಲ್ಲಿ ಹಾಗೂ ಊಹಾತ್ಮಕ ಏಕ ರೇಖೆಯಲ್ಲಿ ಗೋಚರಿಸುವುದು ಮತ್ತೆ 450 ವರ್ಷಗಳ ನಂತರ. ಆದ್ದರಿಂದ ಈ ಸಾರೆಯ ಈ ಗ್ರಹಗಳ ಪಥಸಂಚಲನ ವಿಶೇಷತೆಯನ್ನು ಪಡೆದುಕೊಂಡಿದೆ. ಪ್ರತಿದಿನ ಸಾಯಂಕಾಲ 7.30ರ ನಂತರ ಹಾಗೂ ರಾತ್ರಿ 11.30ರ ಒಳಗೆ 6 ಗ್ರಹಗಳನ್ನು ವಿಕ್ಷೀಸಬಹುದಾಗಿದೆ. ಬುಧ ಗ್ರಹ ಸೂರ್ಯೋದಯಕ್ಕೆ ಮೊದಲು ಅಥವಾ ನಂತರ ಅತೀ ಕಡಿಮೆ ಸಮಯದಲ್ಲಿ ಉದಯಿಸುವುದು ಹಾಗೂ ಅಸ್ತವಾಗುವುದರಿಂದ ಅದರ ಗೋಚರ ಅಸಾಧ್ಯ. ಎಲ್ಲ ಗ್ರಹಗಳು ಎಲಿಪ್ಸಿಯ ವೃತ್ತದಲ್ಲಿ ಸೂರ್ಯನ ಸುತ್ತ ಬೇರೆ ಬೇರೆ ಅಂತರದಲ್ಲಿ ಬೇರೆ ಬೇರೆ ವೇಗದಲ್ಲಿ ಚಲಿಸುತ್ತಿದ್ದರೂ ಈ ಸಾರೆಯ ಅವುಗಳ ಸಮತಲ ನೋಟ ಒಂದೇ ರೇಖೆಗಳಲ್ಲಿ ಬಂದಂತೆ ಗೋಚರಿಸುತ್ತಿವೆ.




ಒಂದು ಉತ್ತಮ ದೂರದರ್ಶಕದ ಸಹಾಯದಿಂದ ನೋಡಿದಾಗ ಗುರು ಗ್ರಹದ ಪ್ರಮುಖ ನಾಲ್ಕು ಉಪಗ್ರಗಳಾದ ಐಯೋ, ಕ್ಯಾಲಿಸ್ಟೋ, ಯುರೋಪಾ ಹಾಗೂ ಗ್ಯಾನಿಮಿಡ್ ಸ್ಪಷ್ಟವಾಗಿ ಗೋಚರಿಸುತ್ತವೆ. ಹಾಗೇಯೇ ಶನಿ ಗ್ರಹದ ಉಂಗುರಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಇದರೊಂದಿಗೆ ಮಹಾವ್ಯಾಧ ನಕ್ಷತ್ರ ಪುಂಜ ಅದರಲ್ಲಿರುವ ಅಶ್ವಮುಖ ನೇಬ್ಯೂಲಾ, ಲುಬ್ಧಕ ನಕ್ಷತ್ರಗಳನ್ನು ವಿಕ್ಷೀಸಬಹುದು.

ಈ ಖಗೋಳ ವಿಸ್ಮಯವನ್ನು ಪ್ರತಿಯೊಬ್ಬರೂ ಕಣ್ಣು ತುಂಬಿಕೊಳ್ಳಲು ಒಂದು ಸದಾವಕಾಶವನ್ನು ಜ. 29ರ ಸಾಯಂಕಾಲ 7 ಗಂಟೆಯಿಂದ ರಾತ್ರಿ 9.30ರವರೆಗೆ ಸಾರ್ವಜನಿಕರಿಗಾಗಿ, ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿದೆ.

ಶ್ರೀ ರಾಮಚಂದ್ರ ಮೋನೆ ಇವರ ಮನೆಯ ಆವರಣ, 'ಧನ್ಯ' ಶ್ರೀ ಶಂಕರಾಚಾರ್ಯ ರಸ್ತೆ, 3ನೇ ಕ್ರಾಸ್, ರೇಲ್ವೇ ಕ್ವಾರ್ಟರ್ಸ್‌ಗೆ ಹೋಗುವ ರಸ್ತೆ, ವಕೀಲ ಚಾಳ, ಗದಗ ಇಲ್ಲಿ ಆಸಕ್ತರಿಗೆ ವಿಕ್ಷೀಸಲು ಅವಕಾಶವಿದೆ ಎಂದು ನಿವೃತ್ತ ವಿಜ್ಞಾನ ಶಿಕ್ಷಕರಾದ ರಾಮಚಂದ್ರ ಮೋನೆ ಹಾಗೂ ಜೆಸಿ ಪ್ರೌಢಶಾಲೆಯ ಕನ್ನಡ ಶಿಕ್ಷಕರಾದ ಸಂತೋಷ ಯರ್ಲಗಟ್ಟಿಯವರು ಹಾಗೂ ಅವರ ಶಿಷ್ಯ ಬಳಗದವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಗ್ರಹಗಳ ಪಥಸಂಚಲನದಿಂದ ಭೂಮಿಯ ಮೇಲೆ ಯಾವುದೇ ರೀತಿಯ ಕೆಟ್ಟ ಪರಿಣಾಮಗಳಾಗಲಿ ಅಥವಾ ಅವಘಡಗಳಾಗಲೀ ಸಂಭವಿಸುವುದಿಲ್ಲ. ಭೂ ಗುರುತ್ವದಲ್ಲಿ ಯಾವುದೇ ರೀತಿಯ ಬದಲಾವಣೆಯಾಗುವುದಿಲ್ಲ. ಈ ವಿದ್ಯಮಾನವನ್ನು ಎಲ್ಲರೂ ನೋಡಿ ನಲಿಯಬೇಕಾದ ಸಂದರ್ಭವಾಗಿದೆ.

### ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಲ್ಲಿ ನವೀಕೃತ ಫಿಸಿಯೋಥೆರಪಿ ಲೋಕಾರ್ಪಣೆ

# ರೆಡ್ ಕ್ರಾಸ್‌ನಿಂದ ಅತ್ಯುತ್ತಮ ಸಮಾಜ ಸೇವೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಗದಗ ಜಿಲ್ಲಾ ಶಾಖೆಯು ಅತ್ಯುತ್ತಮ ಸಮಾಜ ಸೇವೆ ಮಾಡುತಿದ್ದು, ವಿಕಲಾಂಗ ಚೇತನರಿಗೆ ಸ್ವಾವಲಂಬಿಯಾಗಲು ಉತ್ತಮ ಅವಕಾಶ ಮಾಡಿಕೊಡುತ್ತಿದೆ ಎಂದು ಕಾಂಗ್ರೆಸ್ ಯುವ ಮುಖಂಡ ಕೃಷ್ಣಗೌಡ ಹೆಚ್.ಪಾಟೀಲ ಅಭಿಪ್ರಾಯಪಟ್ಟರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆಗೆ ಗದಗ ತೇರಾಪಂಥ್ ಮಹಿಳಾ ಮಂಡಳ ಹಾಗೂ ಕೊಠಾರಿ ಕುಟುಂಬದವರು ದೇಣಿಗೆ ನೀಡಿದ ಸುಮಾರು 2 ಲಕ್ಷ ರೂ ಮೊತ್ತದ ಫಿಸಿಯೋಥೆರಪಿ ಉಪಕರಣಗಳೊಂದಿಗೆ ನವೀಕೃತ ಫಿಸಿಯೋಥೆರಪಿ ಉದ್ಘಾಟಿಸಿ ಅವರು ಮಾತನಾಡಿದರು.

ಸಚಿನ್ ಪಾಟೀಲ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯು ಕೊಡಮಾಡಿದ 25 ಶ್ರವಣೋಪಕರಣಗಳನ್ನು ವಿತರಿಸಿ ಮಾತನಾಡಿ, ಈ ಸಾಧನಗಳು ಶಬ್ದಗಳನ್ನು ಆಲಿಸಿ ಭಾಷೆಯನ್ನು ಕಲಿಯಲು ಸಹಾಯ ಮಾಡುವುದಲ್ಲದೆ ಸಮಾಜದಲ್ಲಿ ಎಲ್ಲರ ಜೊತೆ ಬೆರೆತು ಸಾಮಾನ್ಯ ಜೀವನ ನಡೆಸಲು ಅತ್ಯುತ್ತಮ ಸಾಧನಗಳಾಗಿವೆ ಎಂದು ತಿಳಿಸಿದರು.

ಗಜೇಂದ್ರಗಡದ ಗಣ್ಯ ವ್ಯಾಪಾರಸ್ಥರು ಹಾಗೂ ಸಂಸ್ಥೆಯ ಹಿರಿಯ ಸದಸ್ಯರಾದ ಅಶೋಕ ಬಾಗಮಾರ ಮಾತನಾಡಿ, ಸೇವಾ ಮನೋಭಾವ ಹೊಂದಿರುವ ಈ ಸಂಸ್ಥೆಯ ಸೇವಾ ಕಾರ್ಯಗಳು ಪ್ರೇರಣೆಯಾಗಿದೆಯಲ್ಲದೆ, ಈ ಅರ್ಥಪೂರ್ಣ ಕಾರ್ಯಕ್ರಮ ಶ್ಲಾಘನೀಯ ಎಂದರು.




ಇದೇ ಸಂದರ್ಭದಲ್ಲಿ ವರ್ಕ್‌ಶಾಪ್‌ನಲ್ಲಿ ಪಿ & ಓ ತಂತ್ರಜ್ಞರಾದ ತಸ್ಲಂಅಲಿ ಜಿ ಮುಲ್ಲಾ ತಯಾರಿಸಿದ ಎರಡು ಕೃತಕ ಕಾಲು, ಶೂ ಮೇಕರ್ ಶಿವಯೋಗಿ ಬೆಳವಡಿ ತಯಾರಿಸಿದ ವಕ್ರಪಾದ ಸ್ಯಾಂಡಲ್ಸ್ & ಹ್ಯಾಂಡ್ ಸ್ಯಾಂಡಲ್ಸ್ ವಿತರಿಸಲಾಯಿತು.

ಕಾರ್ಯಕ್ರಮದ ಔಚಿತ್ಯವನ್ನು ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ನಡೆದುಬಂದ ದಾರಿಯನ್ನು ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ. ಎಮ್.ಡಿ. ಸಮುದ್ರಿ ವಿವರಿಸಿದರು. ಸಭಾಪತಿಗಳಾದ ಡಾ. ಆರ್.ಎನ್. ಗೋಡಬೋಲೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಅಶೋಕ ಜೈನ್, ಉಪಸಭಾಪತಿಗಳಾದ ನಾರಾಯಣಪ್ಪ ಇಲ್ಲೂರು, ಲಂಡನ್‌ನಿಂದ ಆಗಮಿಸಿದ ಡಾ. ಬೂದಿಹಾಳ ದಂಪತಿಗಳು, ಆಡಳಿತ ಮಂಡಳಿಯ ಸದಸ್ಯರು ಹಾಗೂ ರೆಡ್ ಕ್ರಾಸ್ ಸಂಸ್ಥೆಯ ಹಿರಿಯ ಸದಸ್ಯರು ಉಪಸ್ಥಿತರಿದ್ದರು.

ವಾಗ್ದೇವಿ ಜಿ.ಕುಲಕರ್ಣಿ ಪ್ರಾರ್ಥಿಸಿ ಕಾರ್ಯಕ್ರಮ ನಿರೂಪಿಸಿದರು. ವರದಾ ಎನ್.ಕೋಲಕಾರ ವಂದಿಸಿದರು.

ದಾನಿಗಳಾದ ಗೀತಾ ಗುಡೇನಕಟ್ಟಿ, ನಜಬುನ್ನೀಸ್ಸಾಬೇಗಂ ಡಿ.ಸಮುದ್ರಿ, ಡಾ. ಎಸ್. ಎಸ್. ಬೂದಿಹಾಳ, ವಿಜಯಲಕ್ಷ್ಮೀ ಬೂದಿಹಾಳ, ತಜ್ಞ ವೈದ್ಯರಾದ ಡಾ. ಚಂದ್ರಶೇಖರ ಬಳ್ಳಾರಿ, ಡಾ. ಪ್ರಶಾಂತ ಪಾಟೀಲ, ಹುಬ್ಬಳ್ಳಿಯ ಶ್ರವಣ ತಜ್ಞರಾದ ಪ್ರಶಾಂತಗೌಡ ಪಾಟೀಲ ಹಾಗೂ ಕೊಠಾರಿ ಕುಟುಂಬದವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ಸರ್ಕಾರ

**ಕಾರ್ಯನಿರ್ವಾಹಕ ಅಭಿಯಂತರರು**

**ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ**

**Phone No : 08372-238782 Fax No. 08372-237268**

**E.Mail : eepwdgad@gmail.com**

ನಂ:ಕಾನಿಇಂಗಃಲೋಇ:ಪಿಬಿ-1:ವಿವಿಧ:2024-25/4167 ದಿನಾಂಕ : 27-01-2025

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು ರೂ. **212.30** ಲಕ್ಷ ಮೊತ್ತದಲ್ಲಿ ಒಟ್ಟು **14** ಕಾಮಗಾರಿಗೆ (ಕನಿಷ್ಟ ಮೊತ್ತ ರೂ. **4.00** ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. **37.00** ಲಕ್ಷ) ಕೆಪಿಪಿಪಿ **(kppp)** ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ **(kppp)** ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ ಡಬ್ಲ್ಯೂ- 1, ಹಾಗೂ 2 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ : **http://www.kppp.karnataka.gov.in/** ದಲ್ಲಿ ನೋಡಿಕೊಳ್ಳಬಹುದು.

**Work Indent No : 18522, 18540, 18530, 18532-SC, 18538-SC, 18528, 18541-SC, 18531-ST, 18534, 18536, 16988, 16266-Category-2A, 18217 Category-2A, 18565-ST**

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **03-02-2025,** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **07-02-2025** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **10-02-2025,** ಆರ್ಥಿಕ ಬಿಡ್ ತೆರೆಯುವ ದಿನಾಂಕ : **11-02-2025**

ಜಿ.ಎಸ್.ಟಿ ಮೊತ್ತವನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶದಂತೆ ಪಾವತಿಸಲಾಗುವುದು. ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರೇ ಭರಿಸತಕ್ಕದ್ದು.

ಅನುಸೂಚಿತ ಜಾತಿ ಮತ್ತು ಪಂಗಡ ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, **10** ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

**ಸೂಚನೆ** : ಮೇಲಿನ ಕಾಮಗಾರಿಗಳ ವರ್ಕ ಇಂಡೆಂಟ್ **1** ರಿಂದ **10** ರ ವರೆಗಿನ ಟೆಂಡರಿನಲ್ಲಿ ಭಾಗವಹಿಸಲು ಆಸಕ್ತಿವುಳ್ಳ ಗುತ್ತಿಗೆದಾರರು ದಿನಾಂಕ : **03-02-2025** ಅಥವಾ ದಿನಾಂಕ : **04-02-2025** ರಂದು ಪೂರ್ವಾಹ್ನ 11.30 ಘಂಟೆಗೆ ಲೋ.ಇ ಗದಗ ವಿಭಾಗ, ಗದಗ ಕಛೇರಿಯಲ್ಲಿ ನಡೆಯುವ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಸಂಚಾರಿ ಗಣತಿಯ ಸಾಮಗ್ರಿ/ತಂತ್ರಾಂಶದ 'ಡೆಮೊ' ವನ್ನು ಪ್ರದರ್ಶಿಸಿ ಟೆಂಡರಿನಲ್ಲಿ ಭಾಗವಹಿಸತಕ್ಕದ್ದು.

**ಸಹಿ/- ಕಾರ್ಯಪಾಲಕ ಅಭಿಯಂತರರು,**
**ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/568/2024-25

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka